ಸರ್ಕಾರದ ಅಧೀನ ಕಾರ್ಯದರ್ಶಿ (ಸಾಮಾನ್ಯ)
ಶಿಕ್ಷಣ ಇಲಾಖೆ

ಅನುಬಂಧ – 1

ಸರ್ಕಾರಿ ಜಿಲ್ಲಾ ಮುದ್ರಣಾಲಯ ಮಡಿಕೇರಿ ಇಲ್ಲಿಂದ ಸ್ಥಳಾಂತರಿಸಿರುವ ಹುದ್ದೆಗಳ ವಿವರ

SL. NO.	DESIGNATION	PAY SCALE	NO OF POSTS TO BE SHIFTED	
				PLACE
1	Assistant Director	10800-20025	1	Government Central Press Bangalore
2	Supervisor	10000-18150	1	Government Central Press Bangalore

ಅನುಬಂಧ – 2

ಸರ್ಕಾರಿ ಜಿಲ್ಲಾ ಮುದ್ರಣಾಲಯ, ಮಡಿಕೇರಿ ಇಲ್ಲಿ ಮರುಪದನಾಮೀಕರಿಸಿರುವ ಹುದ್ದೆಗಳ ವಿವರ

SL. NO.	DESIGNATION	PAY SCALE	NO OF POSTS TO BE REDESIGNATED	PAY SCALE
1	Senior Proof Examiner	7275-13350	1 Posts as FDA (I)	7275-13350
2	Junior Proof Examiner	5800-10500	1 Posts as SDA (I)	5800-10500
3	Assistant Binder	5200-8200	5 Posts As Packers	4800-7275

ANNEXURE – 3

ಸರ್ಕಾರಿ ಜಿಲ್ಲಾ ಮುದ್ರಣಾಲಯ, ಮಡಿಕೇರಿ ಇಲ್ಲಿ ರದ್ದುಪಡಿಸಲಾದ ಹುದ್ದೆಗಳ ವಿವರ

SL. NO.	DESIGNATION	PAY SCALE	NO OF POSTS TO ABOLISHED	
1	Senior Compositor	8000-14800	3	
2	Senior Machine Minder	8000-14800	2	
3	Wireman	6250-12000	1	
4	Junior proof examiner	5800-10500	4	
5	Compositor	5800-10500	9	
6	Machine Minder	5800-10500	4	
7	Binder	5800-10500	3	

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಪಟಗಾರ್

ಸರ್ಕಾರದ ಅಧೀನ ಕಾರ್ಯದರ್ಶಿ (ಸಾಮಾನ್ಯ)

ಶಿಕ್ಷಣ ಇಲಾಖೆ

ಪಿ.ಆರ್. 2008

ಆರ್ಥಿಕ ಸಚಿವಾಲಯ

ವಿಷಯ: ಶ್ರೀ ಜವರೇಗೌಡ, ಲೆಕ್ಕಾಧೀಕ್ಷಕ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಸನ್ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸುವ ಬಗ್ಗೆ.

ಓದಲಾಗಿದೆ:

ಡೆಪ್ಯುಟಿ ರಿಜಿಸ್ಟ್ರಾರ್ ವಿಚಾರಣೆಗಳು–1, ಕರ್ನಾಟಕ ಲೋಕಾಯುಕ್ತ ಇವರ ಪತ್ರ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಎಂವೈಎಸ್–525/2012/ಡಿಆರ್ಇ–1 ದಿನಾಂಕ:10.07.2012 ಮತ್ತು ಉಪ ಲೋಕಾಯುಕ್ತರ ವರದಿ ದಿ: 25.04.2012.

ಪ್ರಸ್ತಾವನೆ:

ಡೆಪ್ಯುಟಿ ರಿಜಿಸ್ಟ್ರಾರ್ ವಿಚಾರಣೆಗಳು–1, ಕರ್ನಾಟಕ ಲೋಕಾಯುಕ್ತ ಇವರು ಮೇಲೆ ಓದಲಾದ ಪತ್ರದೊಂದಿಗೆ ಕಳುಹಿಸಿರುವ ದಿನಾಂಕ:25.04.2012ರ ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ನಿಯಮ 12(3)ರ ಅಡಿಯಲ್ಲಿ ನೀಡಿರುವ ವರದಿಯಲ್ಲಿ ಶ್ರೀ ಜವರೇಗೌಡ, ಲೆಕ್ಕಾಧೀಕ್ಷಕರು, ರಾಜ್ಯ ಲೆಕ್ಕಪತ್ರ ಇಲಾಖೆ ಅವರು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಹಾಸನ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಶ್ರೀ ಪಿ.ಎನ್.ವೆಂಕಟೇಶ, ಗುತ್ತಿಗೆದಾರರು, ಹಾಸನ ಇವರು ಲಾರಿಗಳಲ್ಲಿ ಸರಬರಾಜು ಮಾಡಿದ ಆಹಾರ ಪಡಿತರದ ಬಾಬ್ತು 2009ನೇ ಡಿಸೆಂಬರ್ ತಿಂಗಳ ಬಿಲ್‌ನ ಚೆಕ್‌ನ್ನು ನೀಡಲು ಅವರಿಂದ ರೂ.5000/–ಗಳ ಲಂಚ ಪಡೆಯುತ್ತಿದ್ದಾಗಲೇ ದಿ: 19.1.2010ರಂದು ಕರ್ನಾಟಕ ಲೋಕಾಯುಕ್ತ ಪೊಲೀಸ್‌ರ ಬಲೆಗೆ ಸಿಕ್ಕಿಬಿದ್ದಿದ್ದು ಈ ಬಗ್ಗೆ ನಡೆದ ಮುಂದಿನ ತನಿಖೆಯಿಂದಾಗಿ ಸಂಗ್ರಹವಾಗಿರುವ ಸಂಗತಿಗಳು, ಮಾಹಿತಿ, ದಾಖಲೆ ಆಧಾರಗಳಿಂದ ಸದರಿ ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1)ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಸ್ಥಿರಪಟ್ಟಿದ್ದು ಸದರಿ ದುರ್ನಡತೆ ಸಂಬಂಧದಲ್ಲಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14–ಎ ರನ್ವಯ ಪ್ರಕರಣವನ್ನು ಉಪ ಲೋಕಾಯುಕ್ತ–1 ಅವರಿಗೆ ವಹಿಸುವಂತೆ ಕೋರಿರುತ್ತಾರೆ.

ಇದನ್ನು ಪರಿಶೀಲಿಸಿದ ಸರ್ಕಾರವು ಪ್ರಕರಣವನ್ನು ಪೂರ್ಣ ಪ್ರಮಾಣದ ವಿಚಾರಣೆಗಾಗಿ ಸನ್ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲು ತೀರ್ಮಾನಿಸಿ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಆಇ 184 ರಾಲೆಪ 2012 ಬೆಂಗಳೂರು ದಿನಾಂಕ:23.07.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ14-ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಜವರೇಗೌಡ, ಲೆಕ್ಕಾಧೀಕ್ಷಕರು, ರಾಜ್ಯ ಲೆಕ್ಕಪತ್ರ ಇಲಾಖೆ ಇವರ ವಿರುದ್ಧ ಮೇಲೆ ಹೇಳಿದ ಆರೋಪಗಳ ಕುರಿತು ಪೂರ್ಣ ಪ್ರಮಾಣದ ವಿಚಾರಣೆಯನ್ನು ಸನ್ಮಾನ್ಯ ಉಪ ಲೋಕಾಯುಕ್ತ ಅವರ ಮೂಲಕ ನಡೆಯಬೇಕೆಂದು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಲಕ್ಷ್ಮಣ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಆಡಳಿತ & ಮುಂಗಡ)

ಪಿ.ಆರ್. 1937

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವಾಲಯ

ವಿಷಯ: ನಿರ್ದಿಷ್ಟ ಗುರಿಯ ಸಾರ್ವಜನಿಕ ವಿತರಣಾ ಪದ್ದತಿಯಡಿ ಕಾರ್ಯನಿರ್ವಹಿಸುತ್ತಿರುವ ಪಡಿತರ ವಸ್ತುಗಳ ಚಿಲ್ಲರೆ ಮಾರಾಟಗಾರರಿಗೆ ನೀಡಲಾಗುತ್ತಿರುವ ಅಕ್ಕಿಯ ಲಾಭಾಂಶ ದರವನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ: (1) ಸರ್ಕಾರದ ಆದೇಶ ಸಂಖ್ಯೆ:ಆನಾಸ 372 ಡಿಆರ್‌ಎ 05, ದಿನಾಂಕ:27.08.2008.

(2) ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಇವರ ಪತ್ರ ಸಂಖ್ಯೆ: ಸಿಎಫ್‌ಎಸ್:ಡಿಡಿ:III : 165/2005- 06, ದಿನಾಂಕ:08.02.2011.

ಪ್ರಸ್ತಾವನೆ:

ಮೇಲೆ ಉಲ್ಲೇಖ(1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಚಿಲ್ಲರೆ ಮಾರಾಟಗಾರರಿಗೆ ನೀಡಲಾಗುತ್ತಿರುವ ಲಾಭಾಂಶವನ್ನು ಪ್ರತಿ ಕ್ವಿಂಟಾಲ್ ಅಕ್ಕಿಗೆ ರೂ.29/- ಎಂದು ನಿಗಧಿಪಡಿಸಲಾಗಿರುತ್ತದೆ.

ಮೇಲೆ ಉಲ್ಲೇಖ (2) ರಲ್ಲಿ ಓದಲಾದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಆಯುಕ್ತರ ಪತ್ರದಲ್ಲಿ ನ್ಯಾಯ ಬೆಲೆ ಅಂಗಡಿಗಳ ಮಾಲೀಕರು ಪ್ರತಿ ಕ್ವಿಂಟಾಲ್ ಆಹಾರಧಾನ್ಯದ ಎತ್ತುವಳಿ, ವಿತರಣೆಗೆ ಖರ್ಚು ಮಾಡುತ್ತಿರುವ ಬಂಡವಾಳದ ಮೇಲಿನ ಬಡ್ಡಿ, ಡಿ.ಡಿ ಕಮೀಷನ್, ತೂಕಮಾಡುವವರ ಸಂಬಳ, ನ್ಯಾಯ ಬೆಲೆ ಅಂಗಡಿಗಳ ಬಾಡಿಗೆ ವೆಚ್ಚ, ವಿದ್ಯುಚ್ಛಕ್ತಿ ವೆಚ್ಚ, ಲೇಖನ ಸಾಮಗ್ರಿಗಳ ವೆಚ್ಚ, ಪ್ರಯಾಣ ವೆಚ್ಚ ಇತ್ಯಾದಿಗಳನ್ನು ಲೆಕ್ಕಹಾಕಿ ಪ್ರಸ್ತುತ ಚಿಲ್ಲರೆ ಮಾರಾಟಗಾರರಿಗೆ ನೀಡಲಾಗುತ್ತಿರುವ ಲಾಭಾಂಶಗಳನ್ನು ಹೆಚ್ಚಿಸುವಂತೆ ಕೋರಿರುತ್ತಾರೆ.

ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಆದೇಶ ಸಂಖ್ಯೆ: ಆನಾಸ 67 ಡಿಆರ್‌ಎ 2011, ಬೆಂಗಳೂರು ದಿನಾಂಕ : 10ನೇ ಆಗಸ್ಟ್, 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ನಿರ್ದಿಷ್ಟ ಗುರಿಯ ಸಾರ್ವಜನಿಕ ವಿತರಣಾ ಪದ್ದತಿಯಡಿ ರಾಜ್ಯದ ಎಲ್ಲಾ ನ್ಯಾಯಬೆಲೆ ಅಂಗಡಿಗಳ ಮೂಲಕ ಪಡಿತರ ವಿತರಿಸುವ ಚಿಲ್ಲರೆ ಮಾರಾಟಗಾರರಿಗೆ ಪ್ರತಿ ಕ್ವಿಂಟಾಲ್ ಅಕ್ಕಿಯ ಚಿಲ್ಲರೆ ಲಾಭಾಂಶವನ್ನು ರೂ.29/- ರಿಂದ ರೂ.31/-(ಮೂವತ್ತೊಂದು ರೂಪಾಯಿಗಳು ಮಾತ್ರ) ಗಳಿಗೆ ಹೆಚ್ಚಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಈ ವೆಚ್ಚವನ್ನು 2012-13 ನೇ ಸಾಲಿನ ಲೆಕ್ಕ ಶೀರ್ಷಿಕೆ "2408-01-102-0-01" (ಯೋಜನೇತರ) ರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 598 ವೆಚ್ಚ-5/ 2012, ದಿನಾಂಕ: 26.06.2012 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕದ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎ.ಆರ್. ವಿಜಯಾನಂದ ಶರ್ಮ

ಸರ್ಕಾರದ ಅಧೀನ ಕಾರ್ಯದರ್ಶಿ ,

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ.

ಪಿ.ಆರ್. 1843

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ: ರಾಜ್ಯದ ಅಧೀನ ನ್ಯಾಯಾಲಯಗಳಲ್ಲಿ 32 ಸಾಫ್ಟ್‌ವೇರ್ ಟೆಕ್ನೀಷಿಯನ್ಸ್ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ: ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಇವರ ಪತ್ರ ಸಂಖ್ಯೆ: HCC.No.02/2009, ದಿನಾಂಕ: 02–01–2012.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಇವರು ರಾಜ್ಯದ ಅಧೀನ ನ್ಯಾಯಾಲಯಗಳಲ್ಲಿ ಗ್ರೂಪ್–ಎ ವೃಂದದ ರೂ. 14050–350–14400–400–16800–450–19500–525–22650–600–25050ರ ವೇತನ ಶ್ರೇಣಿಯಲ್ಲಿ 32 ಸಾಫ್ಟ್‌ವೇರ್ ಟೆಕ್ನೀಷಿಯನ್ಸ್ ಹುದ್ದೆಗಳ ಸೃಜನೆಗೆ ಪ್ರಸ್ತಾವನೆ ಸಲ್ಲಿಸಿ, ನ್ಯಾಯಾಲಯಗಳಲ್ಲಿ ಕಾನೂನು ಪ್ರಕ್ರಿಯಾ ಸಂಹಿತೆಗಳನ್ನು ಪಾಲಿಸುವ ಹಾಗೂ ಗೌಪ್ಯತೆಯನ್ನು ಕಾಪಾಡುವ ಅಗತ್ಯತೆ ಇರುವುದರಿಂದ, ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡರೆ ಉಂಟಾಗುವ ಭಾದಕಗಳನ್ನು ವಿವರಿಸಿ, 32 ಸಾಫ್ಟ್‌ವೇರ್ ಟೆಕ್ನೀಷಿಯನ್ಸ್ ಹುದ್ದೆಗಳನ್ನು ಸೃಜಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಆ ಮೇರೆಗೆ ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಲಾ 28 ಎಲ್‌ಎಸಿ 2010 ಬೆಂಗಳೂರು, ದಿನಾಂಕ: 04–08–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮುಂದೆ ವೃಂದ ನಿರ್ವಹಣೆಯ ಸಂಬಂಧದಲ್ಲಿ ತೊಂದರೆ ಉಂಟಾಗುವ ಸಾಧ್ಯತೆ ಇದೆ ಎಂಬುದನ್ನು ತಿಳಿಸುತ್ತಾ, ರಾಜ್ಯದ ಅಧೀನ ನ್ಯಾಯಾಲಯಗಳಲ್ಲಿ ಗ್ರೂಪ್–ಎ ವೃಂದದಲ್ಲಿ 32 ಸಾಫ್ಟ್‌ವೇರ್ ಟೆಕ್ನೀಷಿಯನ್ಸ್ ಹುದ್ದೆಗಳನ್ನು ವೇತನ ಶ್ರೇಣಿ ರೂ. 14050– 350–14400–400–16800–450–19500–525–22650–600–25050 ರಂತೆ ಸೃಜಿಸಲು ಸರ್ಕಾರದ ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2014–00–105–0–01–003"ರ ಅಡಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 236 ವೆಚ್ಚ–10/2012, ದಿನಾಂಕ: 19–07–2012ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಪಿ. ನಾಗರಾಜ
ಸರ್ಕಾರದ ಅಧೀನ ಕಾರ್ಯದರ್ಶಿ(ಆಡಳಿತ–1)
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

LAW, JUSTICE & HUMAN RIGHTS SECRETARIAT

Sub: Creation of 32 posts of Software Technicians in Sub-ordinate Courts of Karnataka.

Read: (1) Letter No. HCC.No.02/2009 dated 02-01-2012 of the Registrar General of High Court, Bangalore.

Preamble:

In the letter read at (1) above, Registrar General of High Court, requested sanction for creation of 32 posts of Software technicians in "Group A" cadre in the scale of ₹ 14050-350-14400-400-16800-450-19500-525-22650-600-25050 stating that the services of the Software Technicians cannot be outsourced as the functioning of courts would be under certain procedural practices and some aspects being confidential in nature.

In view of the facts stated above, the Government has examined the proposal. Hence this order.

GOVERNMENT ORDER NO. LAW 28 LAC 2010, BANGALORE, DATED 4th August 2012

In the circumstances explained in the preamble, Government has agreed to the proposal for creation of 32 posts of Software Technicians in Group 'A' cadre in the scale of ` 14050-350-14400-400-16800-450-19500-525-22650-600-25050 with an observation that it has the potential for cadre management related problems in future.

This expenditure may be incurred with the Head of Account " 2014-00-105-0-01-003 "

This order is issued with the concurrence of the Finance Department vide Note No. FD 236 Exp-10/2012, dt:19-07-2012

By order and in the name of Governor of Karnataka,

M.P. NAGARAJA

Under Secretary to Government(Admn.1)

P.R. 1906 Law, Justice & Human Rights Department.

ಆರ್ಥಿಕ ಸಚಿವಾಲಯ

ವಿಷಯ : ಶ್ರೀ ಡಿ.ಎಂ.ದೇವರಾಜ, ಪ್ರಥಮ ದರ್ಜೆ ಸಹಾಯಕ, ಖಜಾನೆ ಇಲಾಖೆ, ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಸನ್ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸುವ ಬಗ್ಗೆ.

ಓದಲಾಗಿದೆ:

ಅಪರ ನಿಬಂಧಕರು, ವಿಚಾರಣೆಗಳು–8 ಮತ್ತು ಕರ್ನಾಟಕ ಉಪ ಲೋಕಾಯುಕ್ತರು–1 ಬೆಂಗಳೂರು ಇವರ ವರದಿ ಪತ್ರ ಸಂ:Compt/uplok/ BD/703/2011/ARE-8, dt:02.07.2012. ಮತ್ತು 05.07.2012.

ಪ್ರಸ್ತಾವನೆ:

ಅಪರ ನಿಬಂಧಕರು, (ವಿಚಾರಣೆಗಳು–8) ಕರ್ನಾಟಕ ಲೋಕಾಯುಕ್ತ ಇವರು ಮೇಲೆ ಓದಲಾದ ದಿ:05.07.2012.ರ ಪತ್ರದೊಂದಿಗೆ ಕಳುಹಿಸಿರುವ ಉಪ ಲೋಕಾಯುಕ್ತರು–1ರವರ ದಿನಾಂಕ: 02.07.2012ರ ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ನಿಯಮ 12(3)ರ ಅಡಿಯಲ್ಲಿ ನೀಡಿರುವ ವರದಿಯಲ್ಲಿ ಶ್ರೀ ಡಿ.ಎಂ.ದೇವರಾಜ, ಪ್ರಥಮ ದರ್ಜೆ ಸಹಾಯಕ, ಖಜಾನೆ ಇಲಾಖೆ, ಅವರು ಜಿಲ್ಲಾ ಖಜಾನೆ, ಚಿತ್ರದುರ್ಗ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಶ್ರೀ ಎನ್.ಎಸ್. ಮುರಳಿಧರರಾವ್ ಇವರ ವಾರ್ಷಿಕ ವೇತನದ ಬಡ್ತಿ ಬಿಲ್ಲನ್ನು ಪಾಸು ಮಾಡಲು ರೂ.2000/–ಗಳ ಲಂಚ ಕೇಳಿ ಅದನ್ನು ಪಡೆಯುತ್ತಿದ್ದಾಗಲೇ ದಿ:29.12.2010ರಂದು ಕರ್ನಾಟಕ ಲೋಕಾಯುಕ್ತರ ಪೊಲೀಸ್ ಬಲೆಗೆ ಸಿಕ್ಕಿಬಿದ್ದಿದ್ದು ಈ ಬಗ್ಗೆ ನಡೆದ ಮುಂದಿನ ತನಿಖೆಯಿಂದಾಗಿ ಸಂಗ್ರಹವಾಗಿರುವ ಸಂಗತಿಗಳು, ಮಾಹಿತಿ, ದಾಖಲೆ ಆಧಾರಗಳಿಂದ ಸದರಿ ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1)ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಸ್ಥಿರಪಟ್ಟಿದ್ದು ಸದರಿ ದುರ್ನಡತೆ ಸಂಬಂಧದಲ್ಲಿ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ14–ಎ ರನ್ವಯ ಪ್ರಕರಣವನ್ನು ಉಪ ಲೋಕಾಯುಕ್ತ–1ಕ್ಕೆ ವಹಿಸುವಂತೆ ಕೋರಿರುತ್ತಾರೆ.

ಇದನ್ನು ಪರಿಶೀಲಿಸಿದ ಸರ್ಕಾರವು ಪ್ರಕರಣವನ್ನು ಪೂರ್ಣ ಪ್ರಮಾಣದ ವಿಚಾರಣೆಗಾಗಿ ಸನ್ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಲು ತೀರ್ಮಾನಿಸಿ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಆಇ 127 ಅಖಇ 2012 ಬೆಂಗಳೂರು, ದಿನಾಂಕ:21–07–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ14–ಎ ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಡಿ.ಎಂ.ದೇವರಾಜ, ಪ್ರಥಮ ದರ್ಜೆ ಸಹಾಯಕ, ಖಜಾನೆ ಇಲಾಖೆ, ಇವರ ವಿರುದ್ಧ ಮೇಲೆ ಹೇಳಿದ ಆರೋಪಗಳ ಕುರಿತು ಪೂರ್ಣ ಪ್ರಮಾಣದ ವಿಚಾರಣೆಯನ್ನು ಸನ್ಮಾನ್ಯ ಉಪ ಲೋಕಾಯುಕ್ತ ಅವರ ಮೂಲಕ ನಡೆಯಬೇಕೆಂದು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಲಕ್ಷ್ಮಣ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1886 ಆರ್ಥಿಕ ಇಲಾಖೆ(ಆಡಳಿತ & ಮುಂಗಡ)

INFRASTRUCTURE DEVELOPMENT SECRETARIAT

Sub: Release of Funds to M/s Feedback Infrastructure Services Pvt. Ltd. to carry out the Consultancy Services for "Institutional Strengthening & Sector Specific Inventory For PPP Mainstreaming '' for Tourism Department.

Read: 1. G.O No. ID 34 ITS 2012 dated. 05.05.2012.

2. Letter No. Nil dtd. 17.05.2012.from Feedback Infrastructure Services Private Ltd, Bangalore.

3. D.O No. TD/74Prs/2012 dated 10.05.2012 from Principal Secretary to Govt. Tourism Department.

Preamble:

In the Government Order read at (1) above, IDD had sanctioned an amount of Rs. 2,25,000/- (inclusive of taxes) to M/s. Feedback Infrastructure Services Pvt. Ltd. towards the submission of Inception Report.

In the letter read at (2) above, M/s. Feedback Infrastructure Services Pvt. Ltd. has submitted two invoices with a request to make early payment vide nos. 009 /2012-13 dated 16.05.2012 for Rs. 2,29,203/- (Inclusive of taxes) (towards the formation of PPP Cell) and 010 /2012-13 dated 16.05.2012 for Rs. 27,50,425/- (Inclusive of taxes) (towards submission of five Pre-feasibility Reports).

In the letter read at (3) above, Tourism Department has informed that they have received five Pre-feasibility Reports. These reports have been examined and are appropriate.

Hence the following order.

GOVERNMENT ORDER NO.ID 34 ITS 2012 BANGALORE DATED: 20.07.2012

Under the circumstances explained in the preamble, Government is pleased to accord sanction to release Rs. 29,79,628/- (Rs. 2,29,203/- + Rs. 27,50,425/-) (Rupees Twenty Nine Lakhs Seventy Nine Thousand Six Hundred and twenty eight only) to M/s. Feedback Infrastructure Services Pvt. Ltd, payable at Bangalore towards formation of PPP Cell and submission of five Pre-feasibility Reports for Tourism Department.

The expenditure shall be met out under the Budget Head 3451-00-090-1-06-059 Infrastructure Preliminary Studies other expenditure (Plan) 2012-13.

The Senior Associate, M/s. Feedback Infrastructure Services Pvt. Ltd, Bangalore is authorized to draw the amount on a Payees Receipt duly countersigned by the Under Secretary to Government, Infrastructure Development Department from the State Huzoor Treasury, Bangalore and DD/ cheque should be issued in favour of "M/s. Feedback Infrastructure Services Pvt. Ltd".

This order is issued in accordance with the delegation of financial powers to Principal Secretary / Secretary to Govt., vide G.O No. FD 04 TFP 2012 dated 27/04/2012.

By order and in the name of the Governor of Karnataka

M. Manjula

Under Secretary to Govt. (I/c),

Infrastructure Development Department.

P.R. 1905

INFRASTRUCTURE DEVELOPMENT SECRETARIAT

Sub : Release of Funds to M/s Feedback Infrastructure Services Pvt Ltd to carry out the Consultancy Services for "Institutional Strengthening & Sector Specific Inventory For PPP Mainstreaming '' for Transport Department.

Read : 1. G.O No. ID 33 ITS 2012 dated. 05.05.2012.

2. Letter No. FISP/Advisory/IDD-TPTDEPT./12-13/2405 dated. 24.05.2012. from Feedback Infrastructure Services Private Ltd, Bangalore.

3. Letter No. SAARAIE 55 RIC 2012 dated 26.05.2012 from Deputy Secretary to Govt. (I/C), Transport Department.

Preamble:

In the Government Order read at (1) above, IDD had sanctioned an amount of Rs. 2,81,250/- (inclusive of taxes) to M/s. Feedback Infrastructure Services Pvt. Ltd. towards the submission of Inception Report.

In the letter read at (2) above, M/s. Feedback Infrastructure Services Pvt. Ltd. has submitted three invoices with a request to make early payments vide nos. FISPL/ADV/14/12-13/IDD dated 23.05.2012 for Rs. 4,58,404/- (Inclusive of taxes) ,FISPL/ADV/15/12-13/IDD dated 23.05.2012 for Rs. 4,58,404/- (Inclusive of taxes) & FISPL/ADV/15/12-13/IDD dated 23.05.2012 for Rs. 4,58,404/-(Inclusive of taxes) respectively towards the submission of three pre-feasibility reports.

In the letter read at (3) above, Transport Department has informed that they have received three Pre-feasibility Reports. These reports have been examined and are appropriate.

Hence the following order.

GOVERNMENT ORDER NO.ID 33 ITS 2012 BANGALORE DATED: 20.07.2012

Under the circumstances explained in the preamble, Government is pleased to accord sanction to release Rs. 13,75,212/- (Rs. 4,58,404/- + Rs. 4,58,404/-+ Rs. 4,58,404/-) (Rupees Thirteen Lakhs Seventy Five Thousand Two Hundred and twelve only) to M/s. Feedback Infrastructure Services Pvt. Ltd, payable at Bangalore towards submission of three Pre-feasibility Reports for Transport Department.

The expenditure shall be met out under the Budget Head 3451-00-090-1-06-059 Infrastructure Preliminary Studies other expenditure (Plan) 2012-13.

The Senior Accounts Executive, M/s. Feedback Infrastructure Services Pvt. Ltd, Bangalore is authorized to draw the amount on a Payees Receipt duly countersigned by the Under Secretary to Government, Infrastructure Development Department from the State Huzoor Treasury, Bangalore and DD/ cheque should be issued in favour of "M/s. Feedback Infrastructure Services Pvt. Ltd" .

This order is issued in accordance with the delegation of financial powers to Principal Secretary/Secretary to Govt., vide G.O No. FD 04 TFP 2012 dated 27/04/2012.

By order and in the name of the Governor of Karnataka

M. Manjula

Under Secretary to Govt. (I/c),

P.R. 1904 Infrastructure Development Department

INFRASTRUCTURE DEVELOPMENT SECRETARIAT

Sub: Production & upgradation of ten minutes duration film in English Language on Infrastructure facilities in Karnataka-reg

Read: 1. Letter No. IDD 157 ITS 2010, dated 20.08.2011.

2. Government Order No. IDD 157 ITS 2010 dated 29.09.2011.

3. Letter No. IDD/CSD/1187, Client Servicing, M C & A Ltd., Bangalore, dated 04.07.2012.

Preamble:

In the letter read at (1) above, Infrastructure Development Department had accorded approval for payment of 50% of the total amount quoted (Rs 18,81,000/-) towards production and upgradation of ten minutes duration film in English Language on Infrastructure facilities in Karnataka & the balance to be released after the completion of the assignment.

In the G.O read at (2) above, Government had accorded sanction to release 50% of the total cost for Rs 10,37,372/- (Ten Lakh Thirty Seven Thousand Three Hundred & Seventy Two Only) as an advance towards production & upgradation of ten minutes duration film in English Language on Infrastructure facilities in Karnataka.

In the letter read at (3) above, Client Servicing, M C & A Ltd, Bangalore has requested for payment of remaining amount Rs 10,76,120/- (Ten Lakh Seventy Six Thousand One Hundred & Twenty Only) as per the approval cited in (1) and revisal of Service Tax to 12.36% .

Hence this order.

GOVERNMENT ORDER NO.IDD 157 ITS 2010 BANGALORE DATED: 23.07.2012

In the circumstances, explained in the preamble, Government is pleased to accord sanction for Rs 10,76,120/- (Ten Lakh Seventy Six Thousand One Hundred & Twenty Only)for production & upgradation of ten minutes duration film in English Language on Infrastructure facilities in Karnataka.

The expenditure shall be met out under the Budget Head 3451-00-090-1-06-059 Infrastructure Preliminary Studies other expenditure (Plan) 2012-13.

The Managing Director, MC&A, Bangalore is authorized to draw the amount on a Payees Receipt duly countersigned by the Under Secretary to Government, Infrastructure Development Department from the State Huzoor Treasury, Bangalore.

This order is issued in accordance with the delegation of financial powers to Principal Secretary/Secretary to Govt., vide G.O No. FD 04 TFP 2012 dated 27/04/2012.

By order and in the name of the Governor of Karnataka

M. Manjula

Under Secretary to Govt. (I/c),

Infrastructure Development Department

P.R. 1903

ಕಂದಾಯ ಸಚಿವಾಲಯ

ವಿಷಯ : 2012–13ನೇ ಸಾಲಿನಲ್ಲಿ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಗೆ ಸಂಬಂಧಿಸಿದಂತೆ, ತುರ್ತು ಪರಿಹಾರ ಕ್ರಮ ಕೈಗೊಳ್ಳಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿಗಳಿಂದ ಪತ್ರಗಳ ಮತ್ತು ದೂರವಾಣಿ ಮೂಲಕ ಬಂದ ಬೇಡಿಕೆಗಳು.

ಪ್ರಸ್ತಾವನೆ :

2011–12ನೇ ಸಾಲಿನಲ್ಲಿ ಮುಂಗಾರು ಮಳೆವಿಫಲವಾಗಿ, ರಾಜ್ಯದ 24 ಜಿಲ್ಲೆಗಳ 123 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಉಂಟಾಗಿರುತ್ತದೆ. ಬರ ಪರಿಸ್ಥಿತಿಯನ್ನು ಎದುರಿಸಲು ಕುಡಿಯುವ ನೀರು ಸರಬರಾಜು, ಜಾನುವಾರುಗಳಿಗೆ ಮೇವು ಒದಗಿಸುವ ಮತ್ತು ಜಾನುವಾರು ಸಂರಕ್ಷಣೆ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯನ್ನು ನಿಭಾಯಿಸಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವಂತೆ ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಚಾಮರಾಜನಗರ, ಮೈಸೂರು, ಮಂಡ್ಯ, ಬಳ್ಳಾರಿ, ಕೊಪ್ಪಳ, ರಾಯಚೂರು, ಗುಲ್ಬರ್ಗಾ, ಯಾದಗಿರಿ, ಬೀದರ್, ಬಾಗಲಕೋಟೆ, ಬಿಜಾಪುರ, ಗದಗ, ಧಾರವಾಡ, ಚಿಕ್ಕಮಗಳೂರು, ಬೆಳಗಾವಿ, ಹಾಸನ, ದಾವಣಗೆರೆ, ಹಾವೇರಿ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾದಿಕಾರಿಗಳು ಬೇಡಿಕೆ ಸಲ್ಲಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿಗಳ ಪ್ರಸ್ತಾವನೆಗಳನ್ನು ಕೂಲಂಕಷವಾಗಿ, ಪರಿಶೀಲಿಸಿ, ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿಯನ್ನು ನಿಭಾಯಿಸಲು ರಾಜ್ಯ ವಿಪತ್ತು, ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 149 ಟಿಎನ್‌ಆರ್ 2012(1), ಬೆಂಗಳೂರು, ದಿನಾಂಕ:13–07–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬರ ಪರಿಸ್ಥಿತಿಗೆ ಸಂಬಂಧಿಸಿದಂತೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಈ ಕೆಳಕಂಡಂತೆ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಕ್ರ.ಸಂ.	ಜಿಲ್ಲೆ	ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ)
1	ರಾಮನಗರ,	300–00
2	ಕೋಲಾರ,	400–00
3	ಚಿಕ್ಕಬಳ್ಳಾಪುರ,	600–00
4	ತುಮಕೂರು,	1000–00
5	ಚಿತ್ರದುರ್ಗ,	600–00
6	ಚಾಮರಾಜನಗರ,	400–00
7	ಮೈಸೂರು,	500–00
8	ಮಂಡ್ಯ,	700–00
9	ಬಳ್ಳಾರಿ,	700–00
10	ಕೊಪ್ಪಳ,	400–00
11	ರಾಯಚೂರು,	500–00
12	ಗುಲ್ಬರ್ಗಾ,	700–00
13	ಯಾದಗಿರಿ,	300–00
14	ಬೀದರ್,	500–00
15	ಬಾಗಲಕೋಟೆ,	600–00
16	ಬಿಜಾಪುರ,	500–00
17	ಗದಗ,	500–00
18	ಧಾರವಾಡ,	400–00
19	ಚಿಕ್ಕಮಗಳೂರು,	100–00
20	ಬೆಳಗಾವಿ,	700–00
21	ಹಾಸನ,	600–00
22	ದಾವಣಗೆರೆ,	400–00
23	ಹಾವೇರಿ	700–00
24	ಬೆಂಗಳೂರು ಗ್ರಾಮಾಂತರ	200–00
	ಒಟ್ಟು	**12,300–00**

(ರೂಪಾಯಿ ಹನ್ನೆರೆಡು ಸಾವಿರದ ಮೂರುನೂರು ಲಕ್ಷಗಳು ಮಾತ್ರ)

1) ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ಅನುದಾನವನ್ನು ವೆಚ್ಚ ಮಾಡುವುದು.

2) ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನವನ್ನು ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ಸಮಾಲೋಚಿಸಿ

ಅ) ಕುಡಿಯುವ ನೀರಿನ ವ್ಯವಸ್ಥೆ, ಹಾಗೂ

ಆ) ಜಾನುವಾರುಗಳ ಸಂರಕ್ಷಣೆಗಾಗಿ ಮಾತ್ರ ಅನುದಾನವನ್ನು ಬಳಸುವುದು.

3) ಜಿಲ್ಲಾ ಉಸ್ತುವಾರಿ ಸಚಿವರುಗಳು ಜಿಲ್ಲಾ ಮಟ್ಟದ ಸಭೆಗಳನ್ನು ತಿಂಗಳಿಗೊಮ್ಮೆ ನಡೆಸಿ ಬರಪರಿಸ್ಥಿತಿಯ ಬಗ್ಗೆ ಅವಲೋಕನ ಮಾಡುವುದು ಮತ್ತು ಸರ್ಕಾರದಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರು, ಜಾನುವಾರು ಸಂರಕ್ಷಣೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರಿನ ಯೋಜನೆಗಳು, ಕೊಳವೆ ಬಾವಿ ತೆರೆಯುವುದು ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಸಾಧಿಸುವ ಪ್ರಗತಿಯನ್ನು ವಿಶೇಷವಾಗಿ ಪರಿಶೀಲಿಸುವುದು. ಈ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿರವರುಗಳು ಆಯಾ ಜಿಲ್ಲಾ ಸಚಿವರೊಡನೆ ನಿಕಟ ಸಂಪರ್ಕವಿರಿಸಿಕೊಂಡು ಸಭೆಗಳನ್ನು ಆಯೋಜಿಸಲು ಕ್ರಮ ವಹಿಸುವುದು.

4) ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲಾ ಮಟ್ಟದ ಸಭೆಗಳನ್ನು ತಿಂಗಳಿಗೊಮ್ಮೆ ನಡೆಸಿ ಬರಪರಿಸ್ಥಿತಿಯ ಬಗ್ಗೆ ಅವಲೋಕನ ಮಾಡುವುದು ಮತ್ತು ಸರ್ಕಾರದಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರು, ಜಾನುವಾರು ಸಂರಕ್ಷಣೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರಿನ ಯೋಜನೆಗಳು, ಕೊಳವೆ ಬಾವಿ ತೆರೆಯುವುದು ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಸಾಧಿಸುವ ಪ್ರಗತಿಯನ್ನು ವಿಶೇಷವಾಗಿ ಪರಿಶೀಲಿಸುವುದು. ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಸಭೆಗಳ ನಡಾವಳಿಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.

5) ಪ್ರತಿ ತಾಲ್ಲೂಕಿನಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಬರಪರಿಹಾರ ಕಾಮಗಾರಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನೂ ಸೇರಿಸಿದಂತೆ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ಕರೆದು ಸಿದ್ಧಪಡಿಸಿದ ಹಾಗೂ ಅನುಮೋದಿಸಿದ ಕಾರ್ಯ ಯೋಜನೆಗಳನ್ನು ಯುದ್ಧೋಪಾದಿಯಲ್ಲಿ ಜಾರಿಗೊಳಿಸುವುದು.

6) ಬರಪೀಡಿತ ಪ್ರದೇಶಗಳಿಗೆ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ವ್ಯಾಪಕವಾಗಿ ಪ್ರವಾಸ ಮಾಡುವುದು ಹಾಗೂ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಸಂಬಂಧಪಟ್ಟ ಸಮಸ್ಯೆಗಳು ಉದ್ಭವವಾಗದಂತೆ ನೋಡಿಕೊಳ್ಳುವುದು. ಬರಪೀಡಿತ ಪ್ರದೇಶದಲ್ಲಿ ಜನರು ಗುಳೇ ಹೋಗುವುದನ್ನು ತಡೆಗಟ್ಟಲು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೇಡಿಕೆಗನುಗುಣವಾಗಿ ಅನುಷ್ಠಾನಗೊಳಿಸುವುದು.

7) ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಲು ತಾಲ್ಲೂಕಿಗೊಂದು ಸಹಾಯವಾಣಿಯನ್ನು ಸ್ಥಾಪಿಸಿ, ತಾಂತ್ರಿಕ ಸಿಬ್ಬಂದಿಯನ್ನು ನಿಯೋಜಿಸಿ 24 ಗಂಟೆಯೊಳಗಾಗಿ ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸುವುದು.

8) ಪ್ರತಿ 15 ದಿನಗಳಿಗೊಮ್ಮೆ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ಜಂಟಿಯಾಗಿ ಬರ ಪರಿಹಾರ ಕಾಮಗಾರಿಗಳ ಬಗ್ಗೆ ಪತ್ರಿಕಾ ಗೋಷ್ಠಿ ನಡೆಸಿ ಮಾಧ್ಯಮಗಳಿಗೆ ಜಿಲ್ಲೆಯಲ್ಲಿ ಕೈಗೊಂಡಿರುವ ಕುಡಿಯುವ ನೀರು, ಜಾನುವಾರು ಸಂರಕ್ಷಣೆ, ಉದ್ಯೋಗ ಖಾತರಿ ಯೋಜನೆ ಮತ್ತು ಬರಪರಿಹಾರಕ್ಕೆ ಸಂಬಂಧಿಸಿದಂತೆ ಸಾಧಿಸಿರುವ ಪ್ರಗತಿಯ ಚಿತ್ರಣವನ್ನು ಬಿಂಬಿಸುವುದು. ಪತ್ರಿಕಾಗೋಷ್ಠಿಯಲ್ಲಿ ಸಿದ್ಧಪಡಿಸಿದ ಟಿಪ್ಪಣಿಯನ್ನು ಇ-ಮೇಲ್ ಮುಖಾಂತರ ಸರ್ಕಾರಕ್ಕೆ ರವಾನಿಸುವುದು. ಇ–ಮೇಲ್ ವಿಳಾಸ secyrelief-rev@karnataka.gov.in.

9) ಪ್ರತಿ ಹೋಬಳಿಗೆ ಒಬ್ಬ ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಯನ್ನು ನೇಮಿಸಿ ಅವರ ಮೂಲಕ ಬರಪರಿಹಾರ ಕಾಮಗಾರಿಗಳು, ಜಾನುವಾರು ಸಂರಕ್ಷಣೆ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರ್ವಹಿಸಲಾಗುತ್ತಿರುವ ಕಾಮಗಾರಿಗಳನ್ನು ವ್ಯಾಪಕವಾಗಿ ಪರಿಶೀಲನೆ ಮಾಡುವುದು.

10) ಮುಂದಿನ 2 ತಿಂಗಳುಗಳ ಕಾಲ ಕುಡಿಯುವ ನೀರು/ ಮೇವಿನ ಕೊರತೆ ಹಾಗೂ ಉದ್ಯೋಗಕ್ಕೆ ಕೊರತೆಯುಂಟಾಗದಂತೆ ಹಾಗೂ ಯಾವುದೇ ದೂರುಗಳು ಬರದಂತೆ ಕಾರ್ಯ ನಿರ್ವಹಿಸುವುದು.

11) ಪ್ರತಿಯೊಂದು ಕಾಮಗಾರಿಯ ಆರಂಭ, ಚಾಲ್ತಿಯಲ್ಲಿರುವ ಹಾಗೂ ಮುಕ್ತಾಯದ ಹಂತಗಳ ಛಾಯಾ ಚಿತ್ರಗಳನ್ನು ದಾಖಲಿಸಿ, ಮೂರನೇ ಹಂತದ ಪರಿವೀಕ್ಷಣೆಗೆ ಒಳಪಡಿಸಿ, ಅಂತಿಮ ಬಿಲ್ ಪಾವತಿ ಮಾಡುವುದು

12) ಪೂರ್ಣಗೊಂಡ ಪ್ರತಿಯೊಂದು ಕಾಮಗಾರಿಯ ಛಾಯಾ ಚಿತ್ರಗಳು ಹಾಗೂ ವೆಚ್ಚದ ವಿವರಗಳನ್ನು ಇ–ಮೇಲ್ ಮುಖಾಂತರ (secyrelief-rev@karnataka.gov.in) ಕಳುಹಿಸುವುದು.

13) ಪ್ರತಿಯೊಂದು ಕಾಮಗಾರಿಯ ವಿವರಗಳನ್ನು ಫಲಕದಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಈ ಕೆಳಕಂಡ ಮಾದರಿಯಲ್ಲಿ ನಮೂದಿಸುವುದು.

ಕರ್ನಾಟಕ ಸರ್ಕಾರ

ಪ್ರಕೃತಿ ವಿಕೋಪ ಕಾಮಗಾರಿ

ಕಾಮಗಾರಿಯ ಹೆಸರು:	
ಅಂದಾಜು ಮೊತ್ತ:	
ಕಾಮಗಾರಿ ಪ್ರಾರಂಭಿಸಿದ ದಿನಾಂಕ:	
ಕಾಮಗಾರಿ ಮುಕ್ತಾಯವಾದ ದಿನಾಂಕ:	
ಅನುಷ್ಠಾನಗೊಳಿಸಿದ ಸಂಸ್ಥೆ:	

14) ಪ್ರತಿ ತಿಂಗಳು ಅಂತ್ಯಕ್ಕೆ ಅನುದಾನ ಬಳಕೆಯಾದ ವಿವರಗಳನ್ನು ಮೇಲ್ಕಂಡ ಇ–ಮೇಲ್ ಮುಖಾಂತರ ಸಲ್ಲಿಸುವುದು. ಬಳಕೆ ಪ್ರಮಾಣ ಪತ್ರಗಳನ್ನೂ ಸಹ ತಪ್ಪದೇ ಸರ್ಕಾರಕ್ಕೆ ರವಾನಿಸುವುದು.

15) ಪ್ರತಿ ತಿಂಗಳು ಸಾಧಿಸಿದ ಪ್ರಗತಿಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹಾಗೂ ಪ್ರಾದೇಶಿಕ ಆಯುಕ್ತರ ಗಮನಕ್ಕೆ ತರುವುದು ಮತ್ತು ಅವರಿಂದ ಸಲಹೆ–ಸೂಚನೆಗಳನ್ನು ಪಡೆಯುವುದು.

16) ಅನುದಾನ ಲಭ್ಯತೆ ಇಲ್ಲದೇ ಯಾವುದೇ ದುರಸ್ತಿ ಕಾಮಗಾರಿಗಳನ್ನು ಎಸ್.ಡಿ.ಆರ್.ಎಫ್/ ಎನ್.ಡಿ.ಆರ್.ಎಫ್ ಅಡಿಯಲ್ಲಿ ಕೈಗೊಳ್ಳುವಂತಿಲ್ಲ. ಹಾಗೂ ಕಾಮಗಾರಿಗಳನ್ನು ಬಿಡುಗಡೆಯಾದ ಅನುದಾನಕ್ಕೆ ಸೀಮಿತಗೊಳಿಸುವುದು.

17) ಕುಡಿಯುವ ನೀರಿನ ಸಾಗಾಣಿಕೆ ವೆಚ್ಚ ಇವುಗಳಿಗೆ ಸಂಬಂಧಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಮತ್ತು ಸಾರ್ವಜನಿಕರಿಂದ ಯಾವುದೇ ತರಹದ ದೂರುಗಳು ಬರದಂತೆ ಕ್ರಮ ವಹಿಸುವುದು.

18) ಬರ ಪರಿಹಾರ ಕಾಮಗಾರಿಗಳಿಗೆ ಸಂಬಂಧಿಸಿದಂತೆ ನಿಯಮಾನುಸಾರ ಪೂರ್ಣಗೊಂಡ ಕಾಮಗಾರಿಗಳ ಬಿಲ್ಲುಗಳ ಹಣ ಪಾವತಿಗೆ ಯಾವುದೇ ಕಾರಣಕ್ಕೂ ವಿಳಂಬ ಮಾಡಬಾರದು.

19) ಜಾನುವಾರುಗಳಿಗೆ ಮೇವಿನ ಪೂರೈಕೆಯಲ್ಲಿ ಯಾವುದೇ ಕೊರತೆ ಉಂಟಾಗದಂತೆ ನೋಡಿಕೊಳ್ಳುವುದು.

20) ಕುಡಿಯುವ ನೀರಿಗೆ ಸಂಬಂಧಿಸಿದಂತೆ, ಹೊಸದಾಗಿ ಕೊರೆದಿರುವ ಬೋರ್‌ವೆಲ್‌ಗಳಿಗೆ ವಿದ್ಯುದ್ಧೀಕರಣ ಅಳವಡಿಸುವ ಕಾರ್ಯವನ್ನು ವಿಳಂಬವಾಗದಂತೆ ಕ್ರಮವಹಿಸುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಪೇಯೀಸ್ ರಸೀದಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜು ಮಾಡಿ ಜಿಲ್ಲಾಖಜಾನೆಯಿಂದ ಡ್ರಾ ಮಾಡಿ ಎಸ್.ಡಿ.ಆರ್.ಎಫ್ ಖಾತೆಗೆ ಜಮಾ ಮಾಡಿದ ನಂತರ ಪರಿಹಾರ ಕಾರ್ಯಗಳಿಗೆ ಉಪಯೋಗಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ 2245–01–102–0–00–100 (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂ:ಆಇ 601 ವೆಚ್ಚ–7/2012, ದಿನಾಂಕ:12–07–2012 ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಎಂ. ಆನಂದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ಮತ್ತು ಸೇವೆಗಳು–2).

ಪಿ.ಆರ್. 1893

ಕಂದಾಯ ಸಚಿವಾಲಯ

ವಿಷಯ : 2012–13ನೇ ಸಾಲಿನಲ್ಲಿ ರಾಜ್ಯದಲ್ಲಿ ಮುಂಗಾರು ಮಳೆಯಿಂದ ಉಂಟಾಗುವ ಹಾನಿಗೆ ತುರ್ತು ಪರಿಹಾರ ಕ್ರಮ ಕೈಗೊಳ್ಳಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿಗಳ ಬೇಡಿಕೆಯ ಪತ್ರಗಳು.

ಪ್ರಸ್ತಾವನೆ :

2012–13ನೇ ಸಾಲಿನಲ್ಲಿ ರಾಜ್ಯದ ಪಶ್ಚಿಮ ಘಟ್ಟ, ಕರಾವಳಿ ಪ್ರದೇಶ ಮತ್ತು ಬೆಂಗಳೂರು ನಗರ ಜಿಲ್ಲೆಗಳಲ್ಲಿ ಮುಂಗಾರು ಮಳೆಯಿಂದ ಉಂಟಾಗಬಹುದಾದ ಹಾನಿಗೆ ತುರ್ತು ಪರಿಹಾರ ಕ್ರಮ ಕೈಗೊಳ್ಳಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವಂತೆ ಮೇಲೆ ಓದಲಾದ ಪತ್ರಗಳಲ್ಲಿ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ ಕೊಡಗು, ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಬೇಡಿಕೆ ಸಲ್ಲಿಸಿರುತ್ತಾರೆ. ಈ ಹಿನ್ನಲೆಯಲ್ಲಿ, ರಾಜ್ಯ ವಿಪತ್ತು, ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 149 ಟಿಎನ್‌ಆರ್ 2012(2) ಬೆಂಗಳೂರು, ದಿನಾಂಕ: 13–07–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ಪಶ್ಚಿಮ ಘಟ್ಟ, ಕರಾವಳಿ ಪ್ರದೇಶ ಮತ್ತು ಬೆಂಗಳೂರು ನಗರ ಜಿಲ್ಲೆಗಳಲ್ಲಿ ಮುಂಗಾರು ಮಳೆಯಿಂದ ಉಂಟಾಗಬಹುದಾದ ಹಾನಿಗೆ ತುರ್ತು ಪರಿಹಾರ ಕ್ರಮ ಕೈಗೊಳ್ಳಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಈ ಕೆಳಕಂಡಂತೆ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಕ್ರ. ಸಂ.	ಜಿಲ್ಲೆ	ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ)
1.	ಉತ್ತರ ಕನ್ನಡ	200.00
2.	ದಕ್ಷಿಣ ಕನ್ನಡ	300.00
3.	ಉಡುಪಿ	200.00
4.	ಶಿವಮೊಗ್ಗ	200.00
5.	ಕೊಡಗು	200.00
6.	ಬೆಂಗಳೂರು ನಗರ	200.00
	ಒಟ್ಟು	1300.00

(ರೂಪಾಯಿ ಒಂದು ಸಾವಿರದ ಮೂರು ನೂರು ಲಕ್ಷಗಳು ಮಾತ್ರ)

ಮೇಲಿನಂತೆ ಬಿಡುಗಡೆ ಮಾಡಿದ ಹಣವನ್ನು ಈ ಕೆಳಕಂಡಂತೆ ಆದ್ಯತೆಯ ಮೇರೆಗೆ ಉಪಯೋಗಿಸುವುದು.

ಅ) ಮಾನವ/ ಪ್ರಾಣಿ ಜೀವಹಾನಿ.

ಆ) ಬೆಳೆ ಹಾನಿ.

ಇ) ಕುಡಿಯುವ ನೀರಿನ ವ್ಯವಸ್ಥೆ.

ಈ) ಜಾನುವಾರುಗಳ ಸಂರಕ್ಷಣೆ.

ಉ) ಮೂಲಭೂತ ಸೌಕರ್ಯಗಳಿಗೆ ತುರ್ತು ರಿಪೇರಿ.

2) ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ವೆಚ್ಚ ಮಾಡುವುದು.

3) ಅನುದಾನ ಲಭ್ಯತೆ ಇಲ್ಲದೇ ಯಾವುದೇ ದುರಸ್ತಿ ಕಾಮಗಾರಿಗಳನ್ನು ಎಸ್.ಡಿ.ಆರ್.ಎಫ್/ ಎನ್‌ಸಿಸಿಎಫ್ ಅಡಿಯಲ್ಲಿ ಕೈಗೊಳ್ಳುವಂತಿಲ್ಲ. ಹಾಗೂ ಕಾಮಗಾರಿಗಳನ್ನು ಬಿಡುಗಡೆಯಾದ ಅನುದಾನಕ್ಕೆ ಸೀಮಿತಗೊಳಿಸುವುದು.

4) ಪ್ರಕೃತಿ ವಿಕೋಪದಿಂದ ಆದಂತಹ ವಿಪತ್ತು ಹಾನಿಗೆ ಮಾತ್ರ ಪರಿಹಾರ ನೀಡುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಪೇಯೀಸ್ ರಸೀದಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜು ಮಾಡಿ ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿ ಎಸ್.ಡಿ.ಆರ್.ಎಫ್ ಖಾತೆಗೆ ಜಮಾ ಮಾಡಿದ ನಂತರ ಪರಿಹಾರ ಕಾರ್ಯಗಳಿಗೆ ಉಪಯೋಗಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ 2012–13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2245–01–102–0–00–100 (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂ:ಆಇ 601 ವೆಚ್ಚ–7/2012, ದಿನಾಂಕ:12–07–2012 ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಎಂ. ಆನಂದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ಮತ್ತು ಸೇವೆಗಳು–2).

ಪಿ.ಆರ್. 1892

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಶಿವಮೊಗ್ಗ ಜಿಲ್ಲೆಯಲ್ಲಿ ವಿಮಾನ ನಿಲ್ದಾಣದಲ್ಲಿ ವಿಮಾನಗಳ ಹಾರಾಟಕ್ಕಾಗಿ ರನ್‌ವೇ ಸಿದ್ಧಪಡಿಸಲು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಹಣ ಬಿಡುಗಡೆ ಮಾಡುವ ಬಗ್ಗೆ

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ.ಮೂಅಇ 16 ರಾಅವಿ 2002 ದಿನಾಂಕ 03.01.2007
2. ಸರ್ಕಾರಿ ಆದೇಶ ಸಂಖ್ಯೆ.ಮೂಅಇ 70 ರಾಅವಿ 2007 ದಿನಾಂಕ 19.07.2007
3. ವಿಶೇಷ ಭೂಸ್ವಾಧೀನಾಧಿಕಾರಿ, ಕ.ಕೈ.ಪ್ರ.ಅ.ಮಂಡಳಿ, ಬೈಕಂಪಾಡಿ, ಮಂಗಳೂರು ಇವರ ಪತ್ರ ಸಂಖ್ಯೆ.ಎಲ್.ಎ.ಕ್ಯೂ.ಎಸ್.ಆರ್:5/ 08–09 (VI)/207 ದಿನಾಂಕ 08.05.2012
4. ದಿನಾಂಕ 11.05.2012 ರಂದು ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡೆವಳಿ.

ಪ್ರಸ್ತಾವನೆ:

ಮೇಲೆ ಕ್ರಮ ಸಂ.(1) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ 03.01.2007 ರಲ್ಲಿ ಶಿವಮೊಗ್ಗದಲ್ಲಿ ಒಂದು ಹೊಸ ವಿಮಾನ ನಿಲ್ದಾಣ ನಿರ್ಮಿಸಲು ಅವಶ್ಯವಿರುವ 662 ಎಕರೆ 38 ಗುಂಟೆ ಜಮೀನಿನ ಭೂಸ್ವಾಧೀನಕ್ಕಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಇವರು ಅಂದಾಜಿಸಿದ ಒಟ್ಟು ವೆಚ್ಚ ರೂ.14,58,49,000.00 ಗಳ ಪೈಕಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲು ಪ್ರಾರಂಭಿಕವಾಗಿ ರೂ.5,83,00,000.00 ಗಳನ್ನು ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ ಅಂತಿಮ ಅಧಿಸೂಚನೆ ಹೊರಡಿಸುವ ಹಾಗೂ ಪರಿಹಾರ ಧನವನ್ನು ಬಟವಾಡೆ ಮಾಡುವ ಮುನ್ನ ಎಲ್ಲಾ ಔಪಚಾರಿಕ ಕಾರ್ಯಗಳನ್ನು ಪೂರೈಸುವ ಷರತ್ತಿಗೊಳಪಟ್ಟು ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

2. ಮೇಲೆ ಕ್ರಮ ಸಂಖ್ಯೆ.(2) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ 19.07.2007 ರಲ್ಲಿ ಶಿವಮೊಗ್ಗ ವಿಮಾನ ನಿಲ್ದಾಣಕ್ಕಾಗಿ ಸುಮಾರು 662.38 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗುತ್ತಿದ್ದು, ಇದರಲ್ಲಿ 135 ಎಕರೆ ಜಮೀನು ಖಾಸಗಿ ಜಮೀನಾಗಿದ್ದು, ಉಳಿದ 529 ಎಕರೆ ಸರ್ಕಾರಿ ಜಮೀನಾಗಿರುತ್ತದೆ. ಅದರಲ್ಲಿ ಸುಮಾರು 300 ಕ್ಕಿಂತ ಹೆಚ್ಚು ಬಗರ್ ಹುಕುಂ ಸಾಗುವಳಿ ಮಾಡುತ್ತಾ ಬಂದಿರುವ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಸ್ಥಳಾಂತರಿಸಿ ಅವರಿಗೆ ಸೂಕ್ತ ಪರಿಹಾರ ಮತ್ತು ಪುನರ್ವಸತಿ ವ್ಯವಸ್ಥೆಯನ್ನು ಕಲ್ಪಿಸಲು ಪ್ರತಿ ಎಕರೆಗೆ ರೂ.2.00 ಲಕ್ಷದಂತೆ ಹಾಗೂ 4.00 ಎಕರೆಗೆ ಮೀರದಂತೆ ದಯಾತ್ಮಕ ಪರಿಹಾರ ನೀಡಲು ರೂ.20.13 ಕೋಟಿಗಳನ್ನು ಮಂಜೂರು ಮಾಡಲಾಗಿದೆ.

3. ಮೇಲೆ ಕ್ರಮ ಸಂ: (3) ರಲ್ಲಿ ಓದಲಾದ ಪತ್ರ ದಿ: 08–05–2012ರಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ, ಕ.ಕೈ.ಪ್ರ.ಅ. ಮಂಡಳಿ, ಬೈಕಂಪಾಡಿ, ಮಂಗಳೂರು, ಇವರು ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರಿಗೆ ಬರೆದಿರುವ ಪತ್ರದಲ್ಲಿ ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಸ್ವಾಧೀನಪಡಿಸಿರುವ ಜಮೀನಿನಿಂದ ನಿರ್ವಸಿತರಾದವರಿಗೆ ಸೋಗಾನೆ ಗ್ರಾಮದ ಸರ್ವೆ ನಂ.120ರಲ್ಲಿ ನಿರ್ಮಿಸುತ್ತಿರುವ ಪುನರ್ವಸತಿ ಪ್ರದೇಶಕ್ಕೆ ಸಂಪರ್ಕ ರಸ್ತೆ ಕಲ್ಪಿಸುವ ಸಲುವಾಗಿ ನಿಧಿಗೆ ಗ್ರಾಮದ ಸರ್ವೆ ನಂ.158, 159 ಮತ್ತು 175/5 ರಲ್ಲಿ ರಸ್ತೆಗಾಗಿ 0.29 ಗುಂಟೆ ಜಮೀನನ್ನು ಸ್ವಾಧೀನಪಡಿಸಲು ಹಾಗೂ ರನ್‌ವೇಗಾಗಿ ಸೋಗಾನೆ ಗ್ರಾಮದ ಸರ್ವೆ ನಂ.131 ಮತ್ತು 133 ರಲ್ಲಿ 3 ಎಕರೆ 16 ಗುಂಟೆ ಜಮೀನು ಅಗತ್ಯವಿದೆಯೆಂದು ಈ ಜಮೀನಿಗೆ ಭೂಮೌಲ್ಯ ರೂ.46,62,000/– ಹಾಗೂ ಕಟ್ಟಡ ಮರ, ಮಾಲ್ಕಿ ಅಂದಾಜು ರೂ.7,00,000/– ಗಳು

ಒಟ್ಟು ರೂ.53,62,500/– ವೆಚ್ಚ ತಗಲುತ್ತದೆಂದು ಈ ಬಗ್ಗೆ ಶಿವಮೊಗ್ಗ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಗಳು ನಡೆಸಿದ ಸಭೆಯಲ್ಲಿ ಶಿವಮೊಗ್ಗ ವಿಮಾನ ನಿಲ್ದಾಣದ ರನ್ ವೇ ಗಾಗಿ ಹೆಚ್ಚುವರಿಯಾಗಿ ಬೇಕಾಗಿರುವ ಶಿವಮೊಗ್ಗ ತಾಲ್ಲೂಕು ಸೋಗಾನೆ ಗ್ರಾಮದ ಸರ್ವೆ ನಂ. 131, 133ರಲ್ಲಿನ 3 ಎಕರೆ 16 ಗುಂಟೆ ಜಮೀನನ್ನು ಭೂಸ್ವಾಧೀನ ಕಾಯಿದೆಯಡಿ ಸ್ವಾಧೀನಪಡಿಸುವುದು ವಿಳಂಬವಾಗುವುದರಿಂದ ನೇರವಾಗಿ ಹಿಡುವಳಿದಾರರಿಂದ ಕ್ರಯಕ್ಕೆಪಡೆಯುವಂತೆ ಸೂಚಿಸಿರುವುದಾಗಿಯೂ ಹಾಗೂ ದಿನಾಂಕ: 17–06–2010ರಂದು ಹೊರಡಿಸಿರುವ ಪ್ರಾಥಮಿಕ ಅಧಿಸೂಚನೆಯಲ್ಲಿ ಒಳಗೊಂಡಿರುವ ಜಮೀನನ್ನು ಸಹ ಭೂಸ್ವಾಧೀನಪಡಿಸುವ ಮೊದಲು ನೇರವಾಗಿ ರೈತರಿಂದಲೇ ಖರೀದಿಸಲು ಸೂಚಿಸಿರುತ್ತಾರೆ ಹಾಗೂ ಅದರಂತೆ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹಾಗೂ ಕಾರ್ಯ ನಿರ್ವಾಹಕಾ ಸದಸ್ಯರು, ಕೆ.ಐ.ಎ.ಡಿ.ಬಿ, ಬೆಂಗಳೂರು ಇವರು ದಿ: 25–02–2012ರ ಪತ್ರದಲ್ಲಿ ಶಿವಮೊಗ್ಗ ಜಿಲ್ಲಾಧಿಕಾರಿಗಳಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು, ಶಿವಮೊಗ್ಗ, ಇವರು ದಿನಾಂಕ: 23–04–2012ರಂದು ಸಭೆ ನಡೆಸಿ, ಈ ಜಮೀನಿಗೆ ರೂ.53,62,500.00ಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆಂದು ತಿಳಿಸುತ್ತಾ ಶಿವಮೊಗ್ಗ ವಿಮಾನ ನಿಲ್ದಾಣಕ್ಕಾಗಿ ಸೋಗಾನೆ ಗ್ರಾಮದಲ್ಲಿ 3 ಹಂತದಲ್ಲಿ ಭೂಸ್ವಾಧೀನಪಡಿಸಲು ದರ ನಿಗದಿಯಾಗಿರುವ ಪ್ರಕ್ರಿಯೆ ಬಗ್ಗೆ ಮಾಹಿತಿಯನ್ನು, ಈ ಕೆಳಕಂಡಂತೆ ನೀಡಿರುತ್ತಾರೆ. ಅದರಂತೆ, 3ನೇ ಹಂತದಲ್ಲಿ ವಿಮಾನ ನಿಲ್ದಾಣದ ರನ್ ವೇ ಗಾಗಿ ಭೂಸ್ವಾಧೀನಪಡಿಸಿದ ಜಮೀನಿಗೆ ಖುಷ್ಕಿ ಜಮೀನಿಗೆ 1 ಎಕರೆಗೆ ರೂ.13.50 ಲಕ್ಷ ಇತರೆ ಜಮೀನಿಗೆ 1 ಎಕರೆಗೆ ರೂ.14.50 ಲಕ್ಷ ದರ ನಿಗದಿಪಡಿಸಲಾಗುವುದರಿಂದ ಅಂತಿಮವಾಗಿ 3ನೇ ಹಂತದಲ್ಲಿ ನಿಗದಿಪಡಿಸಿದ ದರವನ್ನು ಈಗ ಖರೀದಿಸುವ ಜಮೀನಿಗೆ ಲೆಕ್ಕಾಚಾರ ಮಾಡಬೇಕಾಗಿರುತ್ತದೆ ಎಂದು ತಿಳಿಸಿ, ಈ ಜಮೀನಿನ ಮೌಲ್ಯದ ಬಗ್ಗೆ ಮಾಹಿತಿಯನ್ನು ಈ ಕೆಳಕಂಡಂತೆ ನೀಡಿರುತ್ತಾರೆ.

ಗ್ರಾಮ	ಸ. ನಂಬರ್	ತರಹೆ	ವಿಸ್ತೀರ್ಣ	ನಿಗದಿಪಡಿಸಿದ ಮೌಲ್ಯ ಲಕ್ಷದಲ್ಲಿ	ಒಟ್ಟು ಮೌಲ್ಯ
ಸೋಗಾನೆ	131	ಖುಷ್ಕಿ	0.26	13.50	8,77,500.00
	131	ಖುಷ್ಕಿ	2.01	13.50	27,33,750.00
ನಿಧಿಗೆ	158	ತರಿ	0.11	14.50	3,98,750.00
	159	ತರಿ	0.10	14.50	3,62,500.00
	175	ತರಿ	0.08	14.50	2,90,000.00
			3.16		**46,62,500.00**

4. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಮೂಅಇ 63 ರಾಅವಿ 2012 ಬೆಂಗಳೂರು, ದಿನಾಂಕ 09.07.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಶಿವಮೊಗ್ಗ ವಿಮಾನ ನಿಲ್ದಾಣದ ಪುನರ್ವಸತಿ ಯೋಜನೆಯ ರಸ್ತೆ ಉದ್ದೇಶಕ್ಕಾಗಿ ಶಿವಮೊಗ್ಗ ತಾಲ್ಲೂಕು ನಿಧಿಗೆ / ಹೋಬಳಿ ನಿಧಿಗೆ ಗ್ರಾಮದ ಸರ್ವೆ ನಂ.158, 159 ಮತ್ತು 175/5 ರಲ್ಲಿ ರಸ್ತೆಗಾಗಿ 0.29 ಎಕರೆ ಹಾಗೂ ರನ್‌ವೇಗಾಗಿ ಸೋಗಾನೆ ಗ್ರಾಮದ ಸರ್ವೆ ನಂ.131 ಮತ್ತು 133 ರಲ್ಲಿ 3 ಎಕರೆ 16 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ರೂ.46,62,000/– ಹಾಗೂ ಕಟ್ಟಡ ಮರ, ಮಾಲ್ಕಿಗಳಿಗೆ ಅಂದಾಜು ರೂ.7,00,000/– ಗಳು ಒಟ್ಟು ರೂ.53,62,500.00 (ಐವತ್ತ ಮೂರು ಲಕ್ಷಗಳು ಅರವತ್ತೆರಡು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿಯನ್ನು ನೀಡಿದೆ.

2. ಈ ಮೊತ್ತವನ್ನು 2012–13 ನೇ ಸಾಲಿನ ಲೆಕ್ಕಶೀರ್ಷಿಕೆ 5465–01–190–1–05 (ಯೋಜನೆ)–211–ಬಂಡವಾಳಗಳು–ಸಣ್ಣ ವಿಮಾನ ನಿಲ್ದಾಣಗಳ ಅಭಿವೃದ್ಧಿ ಇದರಡಿಯಲ್ಲಿ ಒದಗಿಸಿರುವ ರೂ.5.00 ಕೋಟಿಗಳ ಆಯವ್ಯಯದಿಂದ ಭರಿಸತಕ್ಕದ್ದು.

3. ಮೇಲೆ ತಿಳಿಸಿರುವ ಜಮೀನು ಶಿವಮೊಗ್ಗ ವಿಮಾನ ನಿಲ್ದಾಣಕ್ಕಾಗಿ ಈಗಾಗಲೇ ಭೂಸ್ವಾಧೀನ ಪಡಿಸಿರುವ ಜಮೀನಿನ ವಿಸ್ತೀರ್ಣದಲ್ಲಿ ಬಿಟ್ಟುಹೋಗಿರುವ ಬಗ್ಗೆ ಖಚಿತ ಪಡಿಸಿಕೊಂಡು, ಬಿಟ್ಟುಹೋಗಿರುವುದಕ್ಕೆ ಕಾರಣಗಳನ್ನು ಸರ್ಕಾರಕ್ಕೆ ವರದಿ ಮಾಡತಕ್ಕದ್ದು ಹಾಗೂ ಈ ಜಮೀನು ಬಗೇರ್ ಹುಕಂ ಸಾಗುವಳಿದಾರರ ಪ್ರದೇಶದಲ್ಲಿ ಬರುವುದಿಲ್ಲ ಎಂಬುದನ್ನು ಸಹ ಖಚಿತ ಪಡಿಸಿಕೊಳ್ಳುವ ಷರತ್ತಿಗೆ ಒಳಪಟ್ಟು ಈ ಮೊತ್ತವನ್ನು ಖರ್ಚು ಮಾಡುವಂತೆ ಸೂಚಿಸಿದೆ.

4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಕಾರ್ಯಕಾರಿ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು ಇವರು ಪೇಯೀಸ್ ರಸೀತಿಯ (Payees Receipt) ಮುಖೇನ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜು ಪಡೆದು ಹಣ ಪಡೆಯತಕ್ಕದ್ದು.

5. ಈ ಆದೇಶವನ್ನು ದಿನಾಂಕ 27.04.2012 ರ ಆದೇಶ ಸಂಖ್ಯೆ.ಆಇ 4 ಟಿಎಫ್‌ಪಿ 2012 ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳಿಗೆ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾ ಯೋಜನೆಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಜೆ. ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ,

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

ಪಿ.ಆರ್. 1902

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಯೋಜನಾ ಮತ್ತು ಸಾಂಖ್ಯಿಕ ಇಲಾಖೆಗೆ ಹೊಸದಾಗಿ ಕಾರ್ಯದರ್ಶಿ ಹುದ್ದೆಯನ್ನು ಪೂರಕ ಸಿಬ್ಬಂದಿಯೊಂದಿಗೆ ಸೃಜಿಸುವ ಬಗ್ಗೆ.

ಓದಲಾಗಿದೆ : ಯೋಜನಾ ಇಲಾಖೆಯ ಕಡತ ಸಂಖ್ಯೆ ಯೋ.ಇ 108 ಪಿ.ಎಸ್.ಡಿ 2011

ಪ್ರಸ್ತಾವನೆ :

ಮೇಲೆ ಓದಲಾದ ಕಡತದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಮತ್ತು ಸಾಂಖ್ಯಿಕ ಇಲಾಖೆ ರವರು, ಯೋಜನಾ ಇಲಾಖೆಯು ಹಲವು ಶಾಸನಬದ್ಧ ಸಂಸ್ಥೆಗಳನ್ನು ಹಾಗೂ ಸ್ವಾಯತ್ತ ಸಂಸ್ಥೆಗಳನ್ನು ಒಳಗೊಂಡಿದ್ದು, ಈ ಎಲ್ಲಾ ಶಾಸನಬದ್ಧ, ಸ್ವಾಯತ್ತ ಸಂಸ್ಥೆಗಳು ನಿರ್ವಹಿಸುವ ವಿಷಯಗಳ ಸಮನ್ವಯ ಕಾರ್ಯಗಳನ್ನು ಯೋಜನಾ ಇಲಾಖೆಯಲ್ಲಿರುವ ಪ್ರಧಾನ ಕಾರ್ಯದರ್ಶಿಯವರೊಬ್ಬರಿಂದ ನಿರ್ವಹಿಸುವುದು ಕಷ್ಟ ಸಾಧ್ಯವಾಗಿರುವುದರಿಂದ ಯೋಜನಾ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಅಗತ್ಯ ನೆರವು ನೀಡಲು ಕೆಲವೊಂದು ವಿಷಯಗಳ ಬಗ್ಗೆ ಉಸ್ತುವಾರಿ ನೋಡಿಕೊಳ್ಳಲು ಹಾಗೂ ಸಂಬಂಧಪಟ್ಟ ಇಲಾಖೆಗಳಿಗೆ / ಅಧಿಕಾರಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಲು ಯೋಜನಾ ಇಲಾಖೆಗೆ ಒಂದು ಕಾರ್ಯದರ್ಶಿ ಹುದ್ದೆಯನ್ನು ಪೂರಕ ಸಿಬ್ಬಂದಿಯೊಂದಿಗೆ ಸೃಜಿಸುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ. ಈ ಪ್ರಸ್ತಾವನೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವೆಗಳು–4) ಮತ್ತು ಆರ್ಥಿಕ ಇಲಾಖೆಗಳು ಸಹಮತಿ ನೀಡಿರುತ್ತವೆ. ಈ ಪ್ರಸ್ತಾವನೆಗೆ ಮಾನ್ಯ ಮುಖ್ಯಮಂತ್ರಿಗಳು ಅನುಮೋದಿಸಿರುತ್ತಾರೆ. ಅದರಂತೆ ಕೂಡಲೇ ಸೂಕ್ತ ಸರ್ಕಾರಿ ಆದೇಶ ಹೊರಡಿಸಬೇಕೆಂದು ಕೋರಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ :

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 392 ಸಅಸೇ 2012 ಬೆಂಗಳೂರು, ದಿನಾಂಕ 11 ನೇ ಜುಲೈ 2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕರ್ನಾಟಕ ಸರ್ಕಾರ ಸಚಿವಾಲಯದ ಯೋಜನಾ ಇಲಾಖೆಯ ವ್ಯಾಪ್ತಿಯಲ್ಲಿ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಿ ಆದೇಶಿಸಲಾಗಿದೆ.

ಕ್ರ.ಸಂ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ	ಷರಾ
1	ಸರ್ಕಾರದ ಕಾರ್ಯದರ್ಶಿ	01	To be Filled From I.F.S
2	ಪತ್ರಾಂಕಿತ ಆಪ್ತ ಸಹಾಯಕ/ಹಿರಿಯ ಶೀಘ್ರಲಿಪಿಗಾರ	02	
3	ಶಾಖಾಧಿಕಾರಿ/ಹಿರಿಯ ಸಹಾಯಕ	01	
4	ಕಿರಿಯ ಸಹಾಯಕ	01	
	ಒಟ್ಟು	**05**	

ಮುಂದುವರೆದು ಈ ಕೆಳಕಂಡ ಒಟ್ಟು 03 ಪೂರಕ ಸಿಬ್ಬಂದಿಗಳನ್ನು ಮರು ಹೊಂದಾಣಿಕೆ ಮೂಲಕ (Redeployment) ನೇಮಿಸಿಕೊಳ್ಳಲು ಸಹ ಆದೇಶಿಸಿದೆ.

ಕ್ರಸಂ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ವಾಹನ ಚಾಲಕ	01
2	ದಲಾಯತ್	02
	ಒಟ್ಟು	**03**

ಈ ಆದೇಶವನ್ನು ಯೋಜನಾ ಇಲಾಖೆಯ ಕಡತ ಸಂಖ್ಯೆ ಯೋ.ಇ 108 ಪಿ.ಎಸ್.ಡಿ 2011 ರಲ್ಲಿ ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ ಆಇ 260 ವೆಚ್ಚ 6/ 2012, ದಿನಾಂಕ 06–06–2012 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಕೆ.ಲಕ್ಷ್ಮೀನಾರಾಯಣ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆ.ಸು. ಇಲಾಖೆ (ಸೇವೆಗಳು–3)

ಪಿ.ಆರ್. 1911

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ: ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯಲ್ಲಿ ವಿಶೇಷ ಕಾರ್ಯದರ್ಶಿ ಹುದ್ದೆಯನ್ನು ಸೃಜಿಸುವ ಬಗ್ಗೆ.

ಓದಲಾಗಿದೆ: ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಕಡತ ಸಂಖ್ಯೆ:ಸಂವ್ಯಶಾಇ 117 ಆಡಳಿತ 2011.

ಪ್ರಸ್ತಾವನೆ:

ಮೇಲೆ ಓದಲಾದ ಕಡತದಲ್ಲಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯು ಸಚಿವಾಲಯದ 33 ಇಲಾಖೆಗಳಲ್ಲಿ ಹೊರಡಿಸಿರುವ ಸುಮಾರು 300ಕ್ಕೂ ಹೆಚ್ಚು ಅಧಿನಿಯಮಗಳನ್ನು ಕ್ರೋಢೀಕರಿಸಿ ತಿದ್ದುಪಡಿಗಳನ್ನು ಸೇರಿಸಿ ಮುದ್ರಿಸಿ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡುವ ಕಾರ್ಯವನ್ನು ನಿರ್ವಹಿಸಲು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಗೆ ಒಂದು ಪ್ರತ್ಯೇಕ ವಿಶೇಷ ಕಾರ್ಯದರ್ಶಿ ಹುದ್ದೆಯನ್ನು ಸೃಜಿಸಬೇಕೆಂದು ಅಧೀನ ಶಾಸನ ರಚನಾ ಸಮಿತಿಯು ತನ್ನ 27ನೇ ವರದಿಯಲ್ಲಿ ಶಿಫಾರಸ್ಸು ಮಾಡಿರುವುದನ್ನು ಪರಿಶೀಲಿಸಿ ಸಿಆಸುಇ (ಆಡಳಿತ ಸುಧಾರಣೆ– ಕಾರ್ಯಾಧ್ಯಯನ) ವಿಭಾಗವು ಸಹ ವಿಶೇಷ ಕಾರ್ಯದರ್ಶಿ ಹುದ್ದೆ ಮತ್ತು ಅಧೀನ ಸಿಬ್ಬಂದಿ ಹುದ್ದೆಗಳ ಸೃಜನೆಯ ಬಗ್ಗೆ ಕಾರ್ಯಾಧ್ಯಯನ ವರದಿಯಲ್ಲಿ ಶಿಫಾರಸ್ಸು ಮಾಡಿರುವುದರಿಂದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯಲ್ಲಿ ಒಂದು ವಿಶೇಷ ಕಾರ್ಯದರ್ಶಿ ಹುದ್ದೆಯನ್ನು ಈ ಕೆಳಕಂಡ ಆಪ್ತ ಸಿಬ್ಬಂದಿ ಹುದ್ದೆಗಳೊಂದಿಗೆ ಸೃಜಿಸುವಂತೆ ಕೋರಿರುತ್ತದೆ.

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ಸರ್ಕಾರದ ವಿಶೇಷ ಕಾರ್ಯದರ್ಶಿ	1 –ಹುದ್ದೆ
ಸರ್ಕಾರದ ವಿಶೇಷ ಕಾರ್ಯದರ್ಶಿಯವರ ಆಪ್ತ ಶಾಖೆಗೆ		
2	ಶೀಘ್ರಲಿಪಿಗಾರ	1 –ಹುದ್ದೆ
3	ಕಿರಿಯ ಸಹಾಯಕ	1 –ಹುದ್ದೆ
4	'ಡಿ' ದರ್ಜೆ ನೌಕರ	1 –ಹುದ್ದೆ
	ಒಟ್ಟು	**04 –ಹುದ್ದೆಗಳು**

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 200 ಸಅಸೇ 2012 ಬೆಂಗಳೂರು, ದಿನಾಂಕ: 09ನೇ ಜುಲೈ 2012

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಗೆ ಒಂದು ಪ್ರತ್ಯೇಕ ವಿಶೇಷ ಕಾರ್ಯದರ್ಶಿ ಹುದ್ದೆಯನ್ನು ಕೆಳಕಂಡ ಆಪ್ತ ಸಿಬ್ಬಂದಿಯೊಂದಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೃಜಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ಸರ್ಕಾರದ ವಿಶೇಷ ಕಾರ್ಯದರ್ಶಿ (ವೇತನ ಶ್ರೇಣಿ ರೂ.56,500–79,800)	1 –ಹುದ್ದೆ
ಸರ್ಕಾರದ ವಿಶೇಷ ಕಾರ್ಯದರ್ಶಿಯವರ ಆಪ್ತ ಶಾಖೆಗೆ		
2	ಶೀಘ್ರಲಿಪಿಗಾರ	1 –ಹುದ್ದೆ
3	ಕಿರಿಯ ಸಹಾಯಕ	1 –ಹುದ್ದೆ
4	'ಡಿ' ದರ್ಜೆ ನೌಕರ	1 –ಹುದ್ದೆ
	ಒಟ್ಟು	**04 –ಹುದ್ದೆಗಳು**

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ಶಾಖೆಯು ದಿ: 17–04–2012ರ ಟಿಪ್ಪಣಿ ಸಂಖ್ಯೆ: ಸಿಆಸುಇ 53 ಸೇನಿಡಿ 2012 ರಲ್ಲಿ ನೀಡಿರುವ ಹಾಗೂ ಆರ್ಥಿಕ ಇಲಾಖೆಯು ದಿನಾಂಕ: 25.02.2012ರ ಟಿಪ್ಪಣಿ ಸಂಖ್ಯೆ: ಆಇ 42 ವೆಚ್ಚ. 10/2012 ಹಾಗೂ ದಿ: 26–05–2012ರ ಟಿಪ್ಪಣಿ ಸಂಖ್ಯೆ: ಆಇ 172 ವೆಚ್ಚ. 10/2012ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಕೆ. ಲಕ್ಷ್ಮೀನಾರಾಯಣ ರಾವ್

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1912 ಸಿ.ಆ.ಸು. ಇಲಾಖೆ (ಸೇವೆಗಳು–3)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸಲಹೆಗಾರರ ಆಪ್ತ ಶಾಖೆಗೆ ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ : ಯೋಜನಾ ಇಲಾಖೆಯ ಕಡತ ಸಂಖ್ಯೆ:ಪಿಡಿ 15 ಇವಿಎನ್ 2012.

ಪ್ರಸ್ತಾವನೆ:

ಮೇಲೆ ಓದಲಾದ ಕಡತ ಸಂಖ್ಯೆ:ಪಿಡಿ 15 ಇವಿಎನ್ 2012ರಲ್ಲಿ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯಲ್ಲಿ ತಾತ್ಕಾಲಿಕವಾಗಿ ಎರಡು ವರ್ಷಗಳ ಅವಧಿಗೆ ಸೃಜಿಸಲಾಗಿರುವ ವೇತನ ಶ್ರೇಣಿ ರಹಿತ ವಿಶೇಷಾಧಿಕಾರಿ (ಮೌಲ್ಯಮಾಪನ) ಹುದ್ದೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಪ್ರೊ.ಎಸ್. ಮಾದೇಶ್ವರನ್, ಅವರ ಗುತ್ತಿಗೆ ಆಧಾರದ ನೇಮಕಾತಿಯ ಅವಧಿ ಮುಗಿಯುವವರೆಗೆ ಸದರಿ ವಿಶೇಷಾಧಿಕಾರಿ (ಮೌಲ್ಯಮಾಪನ) ಹುದ್ದೆಯನ್ನು ಸರ್ಕಾರದ ಕಾರ್ಯದರ್ಶಿ ಹುದ್ದೆಗೆ ತತ್ಸಮಾನವಾದ ಯೋಜನಾ ಇಲಾಖೆಯ ಸಲಹೆಗಾರರು ಎಂದು ಮರುಪದನಾಮೀಕರಿಸಿರುವುದರಿಂದ ಸದರಿ ಹುದ್ದೆಗೆ ಕಾರ್ಯದರ್ಶಿ ಹುದ್ದೆಗೆ ಲಭ್ಯವಿರುವ ಪೂರಕ ಹುದ್ದೆಗಳನ್ನು ಸೃಜಿಸುವಂತೆ ಯೋಜನಾ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಕೋರಿದ್ದಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 211 ಸಅಸೇ 2012 ಬೆಂಗಳೂರು, ದಿನಾಂಕ: 11ನೇ ಜುಲೈ 2012

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸಲಹೆಗಾರರ ಆಪ್ತ ಶಾಖೆಗೆ ಈ ಹುದ್ದೆಯಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುವ ಪ್ರೊ.ಎಸ್. ಮಾದೇಶ್ವರನ್, ಇವರ ಗುತ್ತಿಗೆ ಆಧಾರದ ನೇಮಕಾತಿಯ ಅವಧಿ ಮುಗಿಯುವವರೆಗೆ ಅಥವಾ ಇವರು ಸಚಿವಾಲಯದ ಯೋಜನಾ ಇಲಾಖೆಯಲ್ಲಿ ಸೇವೆಯಲ್ಲಿ ಇರುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕೆಳಕಂಡ ನಾಲ್ಕು ಹುದ್ದೆಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೃಜಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ಪತ್ರಾಂಕಿತ ಆಪ್ತ ಸಹಾಯಕರು / ಹಿರಿಯ ಶೀಘ್ರಲಿಪಿಗಾರ	1
2	ಶಾಖಾಧಿಕಾರಿ / ಹಿರಿಯ ಸಹಾಯಕ	1
3	ವಾಹನ ಚಾಲಕ	1
4	ದಲಾಯತ್	1
	ಒಟ್ಟು	4

ಈ ಆದೇಶವನ್ನು ಆರ್ಥಿಕ ಇಲಾಖೆಯು ದಿನಾಂಕ: 04.06.2012ರ ಟಿಪ್ಪಣಿ ಸಂಖ್ಯೆ: ಆಇ 437 ವೆಚ್ಚ–12/2012 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಕೆ. ಲಕ್ಷ್ಮೀನಾರಾಯಣ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆ.ಸು. ಇಲಾಖೆ (ಸೇವೆಗಳು–3)

ಪಿ.ಆರ್. 1913

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಮುಖ್ಯ ಚುನಾವಣಾಧಿಕಾರಿಗಳ ಕಛೇರಿಯಲ್ಲಿನ ಶಾಖಾಧಿಕಾರಿ ಹುದ್ದೆಯನ್ನು ಸರ್ಕಾರದ ಅಧೀನ ಕಾರ್ಯದರ್ಶಿ ಎಂದು ತಾತ್ಕಾಲಿಕವಾಗಿ ಉನ್ನತೀಕರಿಸುವ ಬಗ್ಗೆ.

ಓದಲಾಗಿದೆ : ದಿನಾಂಕ: 25–04–2012ರ ಅ.ಸ.ಪ ಸಂಖ್ಯೆ: ಸಿಆಸುಇ 45 ಚುಸಿಆ 2011

ಪ್ರಸ್ತಾವನೆ:

ಮೇಲೆ ಓದಲಾದ ಅರೆ ಸರ್ಕಾರಿ ಪತ್ರದಲ್ಲಿ ಮುಖ್ಯಚುನಾವಣಾಧಿಕಾರಿ ಕಛೇರಿಯಲ್ಲಿನ ಶಾಖಾಧಿಕಾರಿ ಹುದ್ದೆಯನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಸರ್ಕಾರದ ಅಧೀನ ಕಾರ್ಯದರ್ಶಿಯೆಂದು ಉನ್ನತೀಕರಿಸುವಂತೆ ಕೋರಲಾಗಿದೆ. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 286 ಸಅಸೇ 2012 ಬೆಂಗಳೂರು ದಿನಾಂಕ: 28ನೇ ಜೂನ್ 2012

ಮುಖ್ಯ ಚುನಾವಣಾಧಿಕಾರಿ ಕಛೇರಿಯಲ್ಲಿನ ಶಾಖಾಧಿಕಾರಿ ಹುದ್ದೆಯನ್ನು ದಿನಾಂಕ: 17–04–2012ರಿಂದ ಜಾರಿಗೆ ಬರುವಂತೆ ಸರ್ಕಾರದ ಅಧೀನ ಕಾರ್ಯದರ್ಶಿಯೆಂದು ಉನ್ನತೀಕರಿಸಿದ್ದು, ಈ ರೀತಿ ಉನ್ನತೀಕರಿಸಲಾದ ಹುದ್ದೆಯಲ್ಲಿ ಶ್ರೀ ಟಿ. ಬಸವೇಗೌಡ, ತಹಶೀಲ್ದಾರ್ ಗ್ರೇಡ್–1, ಇವರನ್ನು ಸದರಿ ದಿನಾಂಕದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ. ಹಾಗೂ ಈ ರೀತಿ ಉನ್ನತೀಕರಿಸಿದ ಹುದ್ದೆಯನ್ನು ಒಂದು ವರ್ಷದವರೆಗೆ ಅಥವಾ ಮುಂದಿನ ಆದೇಶದವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 528 ವೆಚ್ಚ 12/2012 ದಿನಾಂಕ: 18–6–2012ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಕೆ. ಲಕ್ಷ್ಮೀನಾರಾಯಣ ರಾವ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿ.ಆ.ಸು. ಇಲಾಖೆ (ಸೇವೆಗಳು–3)

ಪಿ.ಆರ್. 1914

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಸರ್ಕಾರದ ವಿಶೇಷ ಕಾರ್ಯದರ್ಶಿ, ಸಿಆಸುಇ, ಇವರಿಗೆ ವಿಷಯಗಳನ್ನು ಹಂಚಿಕೆ ಮಾಡುವ ಬಗ್ಗೆ

ಓದಲಾಗಿದೆ : 1) ದಿನಾಂಕ: 24/05/1994ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 325 ಆಸೇಇ 2009

2) ದಿನಾಂಕ: 14/06/2012ರ ಅಧಿಸೂಚನೆ ಸಂಖ್ಯೆ: ಸಿಆಸುಇ 71 ಆಸೇವ 2012

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕೆಎಎಸ್ ಸೀನಿಯರ್ ಸೂಪರ್ ಟೈಂ ಸ್ಕೇಲ್ ವೃಂದವನ್ನು ರಚಿಸಿ ರೂ.28275–39900 ವೇತನ ಶ್ರೇಣಿಯಲ್ಲಿ ಐದು ಹುದ್ದೆಗಳನ್ನು ಸೃಜಿಸಲಾಗಿರುತ್ತದೆ. ಈ ಐದು ಹುದ್ದೆಗಳಲ್ಲಿ ಒಂದು ಹುದ್ದೆಯನ್ನು ಸರ್ಕಾರದ ವಿಶೇಷ ಕಾರ್ಯದರ್ಶಿ, ಸಿಆಸುಇ ಎಂದು ಗುರುತಿಸಲಾಗಿದೆ.

2. ಮೇಲೆ (2) ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಶ್ರೀ.ಜಿ.ಜಯರಾಂ, ಸೀನಿಯರ್ ಸೂಪರ್ ಟೈಂ ಸ್ಕೇಲ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾಪಂಚಾಯತ್, ಮಂಡ್ಯ ಇವರನ್ನು ಸರ್ಕಾರದ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿ ಹೊಸದಾಗಿ ಸೃಜಿಸಲಾದ ಹುದ್ದೆಗೆ ನೇಮಕ ಮಾಡಲಾಗಿರುತ್ತದೆ.

3. ಕರ್ನಾಟಕ ಸರ್ಕಾರ (ಕಾರ್ಯ ಕಲಾಪಗಳ ನಿರ್ವಹಣೆ) ನಿಯಮಗಳು, 1977ರ ನಿಯಮ 9ರನ್ವಯ ಸರ್ಕಾರದ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಇವರಿಗೆ ವಿಷಯಗಳನ್ನು ಹಂಚಿಕೆ ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಡಿಸಿಎ 4 ಎಆರ್‌ಬಿ 2012, ಬೆಂಗಳೂರು, ದಿನಾಂಕ: 27/06/2012

ಸರ್ಕಾರದ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಇವರಿಗೆ ಸರ್ಕಾರದ ನೀತಿ ನಿರ್ಣಯಗಳಿಗೆ ಸಂಬಂಧಿಸಿದ ವಿಷಯಗಳನ್ನು ಮತ್ತು ಶಾಸನಬದ್ಧ ಅಧಿಕಾರಗಳನ್ನು ಚಲಾಯಿಸುವ ಪ್ರಕರಣಗಳನ್ನು ಹೊರತು ಪಡಿಸಿ ಈ ಆದೇಶದ ಅನುಬಂಧದಲ್ಲಿ ಲಗತ್ತಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆಡಳಿತ, ಸಿಬ್ಬಂದಿ ಮತ್ತು ಕಾರ್ಯಕಾರಿ ವಿಭಾಗಗಳ ವಿಷಯಗಳನ್ನು ಹಂಚಿಕೆ ಮಾಡಿ ಸರ್ಕಾರವು ಆದೇಶಿಸಿದೆ.

ವಿಷಯಕ್ಕೆ ಸಂಬಂಧಿಸಿದ ಕಡತಗಳನ್ನು ಸಂಬಂಧಿಸಿದ ಜಂಟಿ ಕಾರ್ಯದರ್ಶಿ (ಆಡಳಿತ), ಉಪ ಕಾರ್ಯದರ್ಶಿ (ಸಿಬ್ಬಂದಿ) ಮತ್ತು ಉಪ ಕಾರ್ಯದರ್ಶಿ (ಕಾರ್ಯಕಾರಿ) ಇವರ ಮುಖಾಂತರ ಸಲ್ಲಿಸತಕ್ಕದ್ದು.

ಈ ವಿಭಾಗಗಳ ನೀತಿ ನಿರ್ಣಯಗಳಿಗೆ ಸಂಬಂಧಿಸಿದ ಮತ್ತು ಶಾಸನಬದ್ಧ ಅಧಿಕಾರಗಳನ್ನು ಚಲಾಯಿಸುವ ಪ್ರಕರಣಗಳ ಕಡತಗಳನ್ನು ವಿಶೇಷ ಕಾರ್ಯದರ್ಶಿಯವರ ಮುಖಾಂತರ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇವರಿಗೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಡಾ॥ ಮಂಗಳ ಜಿ.ಎಸ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ಸೇವಾ ನಿಯಮಗಳು–1)

ಅನುಬಂಧ

ಸರ್ಕಾರದ ವಿಶೇಷ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ																								
ಸರ್ಕಾರದ ಜಂಟಿ ಕಾರ್ಯದರ್ಶಿ (ಆಡಳಿತ)													ಸರ್ಕಾರದ ಉಪ ಕಾರ್ಯದರ್ಶಿ (ಸಿಬ್ಬಂದಿ)					ಸರ್ಕಾರದ ಉಪ ಕಾರ್ಯದರ್ಶಿ (ಕಾರ್ಯಕಾರಿ)						
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–1)			ಸರ್ಕಾರದ ಅಧೀನ ಕಾರ್ಯದರ್ಶಿ (ಸಿಬ್ಬಂದಿ)			ಸರ್ಕಾರದ ಅಧೀನ ಕಾರ್ಯದರ್ಶಿ (ಲೆಕ್ಕಪತ್ರ–1)			ಸರ್ಕಾರದ ಅಧೀನ ಕಾರ್ಯದರ್ಶಿ (ಲೆಕ್ಕಪತ್ರ–2)				ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–2)			ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ–3)		ಸರ್ಕಾರದ ಅಧೀನ ಕಾರ್ಯದರ್ಶಿ (ಕಾರ್ಯಕಾರಿ)						ಸರ್ಕಾರದ ಅಧೀನ ಕಾರ್ಯದರ್ಶಿ (ರಾಜಕೀಯ)
ಶಾಖಾಧಿಕಾರಿ (ಆಡಳಿತ–ಎ)	ಶಾಖಾಧಿಕಾರಿ (ಆಡಳಿತ–ಬಿ)	ಶಾಖಾಧಿಕಾರಿ (ಸ್ವೀಮರ)	ಶಾಖಾಧಿಕಾರಿ (ಸಿಬ್ಬಂದಿ–1)	ಶಾಖಾಧಿಕಾರಿ (ಸಿಬ್ಬಂದಿ–2)	ಶಾಖಾಧಿಕಾರಿ (ಬಹುಪ್ರತಿ)	ಶಾಖಾಧಿಕಾರಿ (ಲೆಕ್ಕಪತ್ರ–ಎ)	ಶಾಖಾಧಿಕಾರಿ (ಲೆಕ್ಕಪತ್ರ–ಬಿ)	ಶಾಖಾಧಿಕಾರಿ (ಲೆಕ್ಕಪತ್ರ–ಸಿ)	ಶಾಖಾಧಿಕಾರಿ (ನಗದು–1)	ಶಾಖಾಧಿಕಾರಿ (ನಗದು–2)	ಶಾಖಾಧಿಕಾರಿ (ಹೆಚ್ಚುವರಿ ತುಟ್ಟಿಭತ್ಯೆ)	ಶಾಖಾಧಿಕಾರಿ (ಸಾವಿಯೋ)	ಶಾಖಾಧಿಕಾರಿ (ಆಡಳಿತ–ಸಿ)	ಶಾಖಾಧಿಕಾರಿ (ಆಡಳಿತ–ಡಿ)	ಶಾಖಾಧಿಕಾರಿ (ಆಡಳಿತ ಕೋಶ)	ಶಾಖಾಧಿಕಾರಿ (ಆಡಳಿತ–ಇ)	ಶಾಖಾಧಿಕಾರಿ (ಸಾಮಾನ್ಯ ರವಾನೆ)	ಶಾಖಾಧಿಕಾರಿ (ಕಾರ್ಯಕಾರಿ–ಎ)	ಶಾಖಾಧಿಕಾರಿ (ಕಾರ್ಯಕಾರಿ–ಬಿ)	ಮಾಹಿತಿ ಕೇಂದ್ರ 3 ಶಾಖಾಧಿಕಾರಿಗಳು	ಶಾಖಾಧಿಕಾರಿ (ದೇವರಾಜ ಅರಸು ಸ್ವಾಗತ ಕೇಂದ್ರ)	ಶಾಖಾಧಿಕಾರಿ (ಗೋಪಾಲಗೌಡ ಸ್ವಾಗತ ಕೇಂದ್ರ)	ವಿಶೇಷಾಧಿಕಾರಿ ಬಹುಮಹಡಿ ಕಟ್ಟಡ	ಶಾಖಾಧಿಕಾರಿ (ರಾಜಕೀಯ) ಮತ್ತು (ಸಮನ್ವಯ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಡಾ॥ ಮಂಗಳ ಜಿ.ಎಸ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ಸೇವಾ ನಿಯಮಗಳು–1)

ಪಿ.ಆರ್. 1860

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ದಿನಗೂಲಿ ನೌಕರರ ಸಂಭಾವನೆಯನ್ನು ಮಾಸಿಕ ರೂ.1,000/– ಗಳಿಗೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 18 ಸೇಸ್ಥಅ 2009, ದಿನಾಂಕ 11.6.2009.

2) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 86 ಸೇಸ್ಥಅ 2009, ದಿನಾಂಕ 10.2.2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಾಂಕ (1)ರಲ್ಲಿನ ಸರ್ಕಾರಿ ಆದೇಶದಲ್ಲಿ ದಿನಾಂಕ 1.7.1984ರ ನಂತರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಗೂಲಿ ನೌಕರರಾಗಿ ನೇಮಕಗೊಂಡು ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ಒಟ್ಟು ದಿನಗೂಲಿಯ ಜೊತೆಗೆ ಮಾಸಿಕ ರೂ.1,000/–ಗಳನ್ನು ದಿನಾಂಕ: 1.4.2009ರಿಂದ ಜಾರಿಗೆ ಬರುವಂತೆ, ಸದರಿ ಆದೇಶದಲ್ಲಿ ನಿಗದಿಪಡಿಸಿರುವ ಇತರ ಷರತ್ತುಗಳಿಗೊಳಪಟ್ಟು ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ ಕ್ರಮಾಂಕ (2)ರಲ್ಲಿನ ಸರ್ಕಾರಿ ಆದೇಶದಲ್ಲಿ ದಿನಾಂಕ 1.7.1984ರ ಪೂರ್ವದಲ್ಲಿ ವಿವಿಧ ಇಲಾಖೆಗಳಲ್ಲಿ ದಿನಗೂಲಿ ನೌಕರರಾಗಿ ನೇಮಕಗೊಂಡು ಕಾರ್ಯ ನಿರ್ವಹಿಸುತ್ತಿರುವವರಿಗೂ ಸಹ ದಿನಾಂಕ 1.4.2009ರಿಂದ ಜಾರಿಗೆ ಬರುವಂತೆ ಈಗ ನೀಡುತ್ತಿರುವ ದಿನಗೂಲಿಯ ಜೊತೆಗೆ ಮಾಸಿಕ ರೂ.1,000/–ಗಳನ್ನು ಹೆಚ್ಚುವರಿಯಾಗಿ ನೀಡಲು ಮಂಜೂರಾತಿ ನೀಡಲಾಗಿದೆ.

ಪ್ರಸ್ತುತ ದಿನಾಂಕ 21.3.2012ರಂದು ವಿಧಾನ ಮಂಡಲದಲ್ಲಿ ಮಂಡಿಸಿದ 2012–13ನೇ ಸಾಲಿನ ಆಯವ್ಯಯ ಭಾಷಣದಲ್ಲಿ (ಪ್ಯಾರಾ ಸಂಖ್ಯೆ: 256) ದಿನಗೂಲಿ ನೌಕರರ ಸಂಭಾವನೆಯನ್ನು ಪ್ರತಿ ತಿಂಗಳಿಗೆ ರೂ.1,000/–ಗಳಷ್ಟು ಹೆಚ್ಚಿಸಲಾಗುವುದೆಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 34 ಸೇಸ್ಥಅ 2012, ಬೆಂಗಳೂರು, ದಿನಾಂಕ: 31.7.2012.

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ದಿನಗೂಲಿ ನೌಕರರ ಸಂಭಾವನೆಯನ್ನು ಮಾಸಿಕ ರೂ.1,000/– (ಒಂದು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ದಿನಾಂಕ 1.4.2012ರಿಂದ ಜಾರಿಗೆ ಬರುವಂತೆ ಈ ಕೆಳಕಂಡ ಷರತ್ತಿಗೊಳಪಟ್ಟು ಮಂಜೂರಾತಿ ನೀಡಿದೆ :–

1) ಸಂಬಂಧಿಸಿದ ದಿನಗೂಲಿ ನೌಕರರು ದಿನಾಂಕ 1.4.2012ರಂದು ದಿನಗೂಲಿ ನೌಕರರಾಗಿ ಹತ್ತು ವರ್ಷಕ್ಕಿಂತಲೂ ಹೆಚ್ಚು ಸೇವೆ ಸಲ್ಲಿಸಿರಬೇಕು;

2) ದಿನಾಂಕ 1.4.2012ರಂದು ಅವರು ದಿನಗೂಲಿ ಸೇವೆಯಲ್ಲಿರಬೇಕು;

3) ಪ್ರತಿ ತಿಂಗಳಲ್ಲಿ ಇಡೀ ತಿಂಗಳು ಕಾರ್ಯ ನಿರ್ವಹಿಸಿದ ದಿನಗೂಲಿ ನೌಕರರಿಗೆ ರೂ.1,000/–ಗಳ ಹೆಚ್ಚಳವನ್ನು ನೀಡತಕ್ಕದ್ದು. ಒಂದು ತಿಂಗಳಿನಲ್ಲಿ ಕೆಲವು ದಿನಗಳು ಮಾತ್ರ ಕಾರ್ಯ ನಿರ್ವಹಿಸಿದ ನೌಕರರಿಗೆ ಇದನ್ನು ಪ್ರಮಾಣಾನುಸಾರವಾಗಿ (Proportionate) ಕಡಿಮೆ ಮಾಡತಕ್ಕದ್ದು.

ಈ ಆದೇಶವು ದಿನಾಂಕ 1.7.1984ರ ಪೂರ್ವದಲ್ಲಿ ದಿನಗೂಲಿ ನೌಕರರಾಗಿ ನೇಮಕಾತಿ ಹೊಂದಿ ಇನ್ನೂ ಸಕ್ರಮಗೊಳ್ಳದೇ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸುತ್ತಿರುವವರಿಗೂ ಅನ್ವಯವಾಗುತ್ತದೆಂದು ಸ್ಪಷ್ಟೀಕರಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 427 ವೆಚ್ಚ–12/2012, ದಿನಾಂಕ 14.5.2012 ಹಾಗೂ ಟಿಪ್ಪಣಿ ಸಂಖ್ಯೆ: ಆಇ 591 ವೆಚ್ಚ–12/2012, ದಿನಾಂಕ 28.6.2012ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಡಾ: ಮಂಗಳ ಜಿ.ಎಸ್.

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1861 ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು–1).

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : 3ನೇ ಹಣಕಾಸು ಆಯೋಗದ ವರದಿಯ ಶಿಫಾರಸ್ಸುಗಳ ಅನುಷ್ಠಾನ ಕಾರ್ಯಪಡೆಯನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂ: ಸಿಆಸುಇ 72 ಶಿಸನೇ 2009, ದಿನಾಂಕ: 03/07/2009.
2. ಸರ್ಕಾರಿ ಆದೇಶ ಸಂ: ಸಿಆಸುಇ 68 ಶಿಸನೇ 2011, ದಿನಾಂಕ: 24.06.2011.
3. 3ನೇ ಹಣಕಾಸು ಆಯೋಗದ ವರದಿಯ ಶಿಫಾರಸ್ಸುಗಳ ಅನುಷ್ಠಾನ ಕಾರ್ಯಪಡೆಯ ಪತ್ರ ಸಂಖ್ಯೆ: ಮೂರಾಹಾ/ಅ.ಪ/151/2012, ದಿನಾಂಕ: 14.06.2012
4. ಮಾನ್ಯ ಮುಖ್ಯ ಮಂತ್ರಿಯವರ ಟಿಪ್ಪಣಿ ಸಂಖ್ಯೆ: CM/HOA/1329/2012, ದಿನಾಂಕ: 15.06.2012.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ 3ನೇ ಹಣಕಾಸು ಆಯೋಗದ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಕಾರ್ಯಪಡೆಯನ್ನು ರಚಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ 3ನೇ ಹಣಕಾಸು ಆಯೋಗದ ಶಿಫಾರಸ್ಸುಗಳ ಅನುಷ್ಠಾನ ಕಾರ್ಯಪಡೆ ಅವರು 3ನೇ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಸಂಬಂಧ ರಚಿಸಲಾಗಿರುವ ಕಾರ್ಯಪಡೆಯ ಅವಧಿಯನ್ನು 01.07.2011 ರಿಂದ ಒಂದು ವರ್ಷದ ಅವಧಿಗೆ ವಿಸ್ತರಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಅಧ್ಯಕ್ಷರು, 3ನೇ ಹಣಕಾಸು ಆಯೋಗದ ಶಿಫಾರಸ್ಸುಗಳ ಅನುಷ್ಠಾನ ಕಾರ್ಯಪಡೆ ಅವರು 3ನೇ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಸಂಬಂಧ ರಚಿಸಲಾಗಿರುವ ಕಾರ್ಯಪಡೆಯ ಅವಧಿಯನ್ನು 31.03.2013 ರವರೆಗೆ ವಿಸ್ತರಿಸಲು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಟಿಪ್ಪಣಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು 3ನೇ ಹಣಕಾಸು ಆಯೋಗದ ಶಿಫಾರಸ್ಸುಗಳ ಅನುಷ್ಠಾನ ಕಾರ್ಯಪಡೆಯ "ಅಧಿಕಾರವಧಿಯನ್ನು ಮುಂದಿನ ಆದೇಶದವರೆಗೆ ಮುಂದುವರಿಸಲು ಆದೇಶಿಸಿದೆ. ಕೂಡಲೇ ಆದೇಶ ನೀಡುವುದು" ಎಂದು ಆದೇಶಿಸಿದ್ದು, ಅದರಂತೆ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 83 ಶಿಸನೇ 2012, ಬೆಂಗಳೂರು, ದಿನಾಂಕ 28.06.2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 3ನೇ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಆದೇಶ ಸಂಖ್ಯೆ: ಸಿಆಸುಇ 72 ಶಿಸನೇ 2009, ದಿನಾಂಕ: 03.07.2009 ರ ಆದೇಶದನ್ವಯ ರಚಿಸಲಾಗಿರುವ ಕಾರ್ಯಪಡೆಯ ಅವಧಿಯನ್ನು ದಿನಾಂಕ: 01.07.2012 ರಿಂದ 30.06.2013 ರವರೆಗೆ ಒಂದು ವರ್ಷದ ಅವಧಿಗೆ ಮುಂದುವರೆಸಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 586 ವೆಚ್ಚ–12/2012, ದಿನಾಂಕ: 27.06.2012 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ನಾಗರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ರಾಜ್ಯ ಶಿಷ್ಟಾಚಾರ).

ಪಿ.ಆರ್. 1863

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ಸಂಖ್ಯೆ: ಸಿಆಸುಇ 67 ಸೇನಿಸಿ 2012 ದಿನಾಂಕ: 04/07/2012

ಸುತ್ತೋಲೆ

ವಿಷಯ : ಪಾಸ್‌ಪೋರ್ಟ್ ಸೌಲಭ್ಯಗಳನ್ನು ಒದಗಿಸಲು ಪರಿಶೀಲನಾ ಪ್ರಮಾಣ ಪತ್ರವನ್ನು (Verification Certificate) ನೀಡುವ ಬಗ್ಗೆ.

ಉಲ್ಲೇಖ : ದಿನಾಂಕ: 11/01/2001ರ ಸುತ್ತೋಲೆ ಸಂಖ್ಯೆ: ಸಿಆಸುಇ 16 ಎಸ್‌ಆರ್‌ಸಿ 2000

ಪಾಸ್‌ಪೋರ್ಟ್ ಸೌಲಭ್ಯ ಪಡೆಯುವ ಅರ್ಜಿದಾರರಿಗೆ ಪರಿಶೀಲನಾ ಪ್ರಮಾಣಪತ್ರವನ್ನು ದೃಢೀಕರಿಸಿ ವಿತರಿಸುವ ಸಂಬಂಧ ಅಧಿಕಾರಿಗಳಿಗೆ ಈ ಹಿಂದೆ ದಿನಾಂಕ: 11/01/2000ರ ಸುತ್ತೋಲೆ ಸಂಖ್ಯೆ: ಸಿಆಸುಇ 16 ಎಸ್‌ಆರ್‌ಸಿ 2000 ರನ್ವಯ ಸೂಚನೆಗಳನ್ನು ನೀಡಲಾಗಿದೆ.

ಪಾಸ್‌ಪೋರ್ಟ್ ಕಾಯಿದೆ, 1967 ರನ್ವಯ (ಅನುಬಂಧ–ಎಫ್) ಪರಿಶೀಲನಾ ಪ್ರಮಾಣ ಪತ್ರವನ್ನು (Specimen of the Verification Certificate) ದೃಢೀಕರಿಸಲು ಅಧಿಕಾರ ಹೊಂದಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಧಿಕಾರಿಗಳ ವಿವರ ಹಾಗೂ ಕಾರ್ಯ ವಿಧಾನಗಳನ್ನು (ಅಪೆಂಡಿಕ್ಸ್–1ರಲ್ಲಿನ ಅನುಬಂಧ–ಎಫ್ ಮತ್ತು ಜೆ ಟಿಪ್ಪಣಿ) ಅನುಬಂಧ–1ರಲ್ಲಿ ಸ್ಪಷ್ಟಪಡಿಸಲಾಗಿದೆ.

ರಾಷ್ಟ್ರೀಯ ಭದ್ರತೆ ಹಾಗೂ ಕಾಳಜಿಯ ಹಿತದೃಷ್ಟಿಯಿಂದ ಪ್ರಾದೇಶಿಕ ಪಾಸ್‌ಪೋರ್ಟ್ ಅಧಿಕಾರಿ, ಬೆಂಗಳೂರು ರವರು ತಮ್ಮ ದಿನಾಂಕ: 06/06/2012 ಹಾಗೂ 14/06/2012ರ ಪತ್ರಗಳಲ್ಲಿ ಈ ಕೆಳಗಿನ ಅಂಶಗಳ ಬಗ್ಗೆ ತಿಳಿಸಿರುತ್ತಾರೆ.

Issuance of passport to the applicant is a highly sensitive operation. In cases of Tatkal applications, the officer issuing Verification Certificate takes full responsibility (issue a passport to the applicant without police verification report). As you may

surmise, if VCs are issued by these officers for a price or without knowing the applicants who are not eligible to be issued a passport by the Ministry as per Passport Act, 1967 would also be issued a passport based on such VCs issued. This poses a threat to national security and national interest.

VC is compulsory for confirmed applicant's genuineness to issue passport. Hence, officers should be careful while issuing Verification Certificates (VCs) to applicants, whom they know personally and whose antecedents / character can be vouchsafed by them in a undoubted manner "ಹಾಗೂ"… to keep a track of VCs issued by them, (since we have made it compulsory for all VCs to be confirmed for their genuineness before even starting the processing of the applications), and to safeguard their stationeries which could be misused by unscrupulous elements.

Further, the Regional Passport Office has initiated a process wherein the VCs are confirmed for their genuineness from the issuing authority at the time of processing of applications in the PSKs. Otherwise the applicants will not be benefitted by VCs issued by such officers.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಪರಿಶೀಲನಾ ಪ್ರಮಾಣ ಪತ್ರವನ್ನು ದೃಢೀಕರಿಸುವ ಸಕ್ಷಮ ಪ್ರಾಧಿಕಾರಗಳು ಪಾಸ್‌ಪೋರ್ಟ್ ಕಾಯಿದೆ, 1967ರ ನಿಯಮಗಳನ್ನು ಹಾಗೂ ಅನುಬಂಧ–1ರಲ್ಲಿನ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಪರಂತು ಅರ್ಜಿದಾರರ ಪೂರ್ವಪರ ಚರಿತ್ರೆಯನ್ನು ತಿಳಿಯದೇ ಅವರ ಕೋರಿಕೆಯ ಮೇರೆಗಾಗಲೀ ಅಥವಾ ಅವರ ಪರವಾಗಿ ಮಾಡಲಾದ ಶಿಫಾರಸ್ಸಿನ ಮೇರೆಗಾಗಲೀ ಪರಿಶೀಲನಾ ಪ್ರಮಾಣಪತ್ರವನ್ನು ನೀಡತಕ್ಕದ್ದಲ್ಲವೆಂದು ತಿಳಿಸಲಾಗಿದೆ

ಎಸ್.ವಿ. ರಂಗನಾಥ್
ಸರ್ಕಾರದ ಮುಖ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಡಾ|| ಮಂಗಳ ಜಿ.ಎಸ್.
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು–1)

ಅನುಬಂಧ–1

1. The applicant's passport size photograph is also required to be affixed on the Verification Certificate and attested by the officer issuing the Verification Certificate with his / her signature and rubber stamp put in such a way that half the signature and stamp appear on the photograph and half on the certificate.
2. If the applicant has resided at more than one place during the last one year, then all previous addresses with the relevant dates should be mentioned.
3. The Verification Certificate may be got signed by any of the following:
   - (i) An Under Secretary / Deputy Secretary / Director / Joint Secretary / Addl. Secretary /Special Secretary / Secretary / Cabinet Secretary to Government of India.
   - (ii) A Director / Joint Secretary / Additional Secretary / Special Secretary / Chief Secretary to a State Government.
   - (iii) A Sub-Divisional Magistrate / First Class Judicial Magistrate / Additional D M / District Magistrate of the district of residence of applicant.
   - (iv) A District Superintendent of Police / DIG / IG / DGP of the district of residence of applicant.
   - (v) The General Manager and above of a Public Sector Undertaking.
   - (vi) All members of any All India Service or Central Service who are equivalent to or above the rank of an Under Secretary to the Government, i.e., with Grade pay of Rs.6,600/- and above.
   - (vii) Resident Commissioners / Additional Resident Commissioners of all State Governments based in Delhi.
   - (viii) Concerned Tehsildars or concerned SHOs for an applicant staying in the area under his / her jurisdiction.

4. Anyone who issues incorrect verification certificate may be prosecuted under section 12(2) of the Passport Act, 1967.

5. SECTION 6(2) (C) OF THE PASSPORTS ACT, 1967:-

   "Subject to the other provisions of this Act, the passport authority shall refuse to issue a passport or travel document for visiting any foreign country under clause (C) sub-section 5 of any one or more of the following grounds, and on no other ground, namely:

   a) That the applicant is not a citizen of India.

   b) That the applicant may, or is likely to, engage outside India in activities prejudicial to the sovereignty and integrity of India.

   c) That the departure of the applicant from India may, or is likely to be detrimental to the security of India.

   d) That the presence of the applicant outside India may, or is likely to prejudice the friendly relations of India with any foreign country.

   e) That the applicant has, at any time during the period of five years immediately preceding the date of his application, been convicted by a court of India for any offence involving moral turpitude and sentenced in respect thereof imprisonment for not less than two years.

   f) That criminal proceedings in respect of an offence alleged to have been committed by the applicant are pending before a court in India.

   g) That a warrant or summons for the appearance, or a warrant for the arrest of the applicant has been issued by a court under any law for the time being in force or that an order prohibiting the departure from India of the applicant has been made by any such court.

   h) That the applicant has been repatriated and has not reimbursed the expenditure incurred in connection with such repatriation.

ಪಿ.ಆರ್. 1864

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎನ್. ಲಕ್ಷ್ಮಣ್‌ರಾವ್ ಪೇಶ್ವೆ, ಮುಖ್ಯ ಇಂಜಿನಿಯರ, ಇವರನ್ನು ಸೇವೆಯಿಂದ ಅಮಾನತ್ತಿನಲ್ಲಿಡುವ ಬಗ್ಗೆ.

ಓದಲಾಗಿದೆ : ಹೆಚ್ಚುವರಿ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಸಿಟಿ/ಕ್ರೈಂ.54/2012, ದಿನಾಂಕ: 30–06–2012

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 05 ಇಮುವಿ 2012 ಬೆಂಗಳೂರು, ದಿನಾಂಕ 06–07–2012

ಶ್ರೀ ಎನ್. ಲಕ್ಷ್ಮಣ್‌ರಾವ್ ಪೇಶ್ವೆ, ಮುಖ್ಯ ಇಂಜಿನಿಯರ್, ಅವರು ತಮ್ಮ ಸೇವಾವಧಿಯಲ್ಲಿ ಅಕ್ರಮವಾಗಿ ಅಪಾರ ಪ್ರಮಾಣದ ಆಸ್ತಿ ಪಾಸ್ತಿಗಳನ್ನು ಗಳಿಸಿದ್ದಾರೆಂಬ ಮಾಹಿತಿಯ ಮೇರೆಗೆ ಕರ್ನಾಟಕ ಲೋಕಾಯುಕ್ತದ ಪೋಲೀಸರು ದಿನಾಂಕ 22–06–2012 ರಂದು ಬೆಂಗಳೂರು ನಗರದ ಅವರ ಮನೆ ಬ್ಯಾಂಕ್ ಲಾಕರ್ ಮತ್ತು ಕಛೇರಿಯನ್ನು ಶೋಧಿಸಲಾಗಿ ಅಧಿಕಾರಿಯು ಅಪಾರ ಪ್ರಮಾಣದ ಚರ ಮತ್ತು ಸ್ಥಿರಾಸ್ತಿ ಪತ್ತೆ ಮಾಡಿರುವುದರಿಂದಲೂ ;

ಶ್ರೀ ಎನ್. ಲಕ್ಷ್ಮಣ್‌ರಾವ್ ಪೇಶ್ವೆ, ಮುಖ್ಯ ಇಂಜಿನಿಯರ್, ಅವರು ತಮ್ಮ ಆದಾಯದ ಬಲ್ಲ ಮೂಲಗಳಿಗಿಂತಲೂ ಹೆಚ್ಚಿನ ಆಸ್ತಿ ಪಾಸ್ತಿಗಳನ್ನು ಹೊಂದಿದ್ದು, ಇವರ ವಿರುದ್ಧ ವಿವರವಾದ ತನಿಖೆ ಅಗತ್ಯವಿದ್ದು, ತನಿಖೆಯನ್ನು ಕಾಯ್ದಿಟ್ಟು ಅವರನ್ನು ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸುವುದು ಅವಶ್ಯವೆಂದು ಕಂಡುಬಂದಿರುವುದರಿಂದಲೂ ;

ಶ್ರೀ ಎನ್. ಲಕ್ಷ್ಮಣ್‌ರಾವ್ ಪೇಶ್ವೆ, ಮುಖ್ಯ ಇಂಜಿನಿಯರ್, **ಇವರು ದಿನಾಂಕ: 27–06–2012 ರಿಂದ 48 ಗಂಟೆಗಳಿಗೂ ಹೆಚ್ಚು ಕಾಲ ನ್ಯಾಯಾಂಗ ಬಂಧನದಲ್ಲಿದ್ದುದರಿಂದ ಕರ್ನಾಟಕ ನಾಗರೀಕ ಸೇವಾ (ಸಿಸಿಎ)) ನಿಯಮಾವಳಿಯ ನಿಯಮ 10(2)(ಎ) ರನ್ವಯ ಅಂದಿನಿಂದಲೇ ಅಮಾನತ್ತಿನಲ್ಲಿದ್ದಂತೆ ಪರಿಗಣಿಸಬೇಕಾಗಿರುವುದರಿಂದಲೂ;**

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 10(1)(ಅಅ)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಶ್ರೀ ಲಕ್ಷ್ಮಣ್‌ರಾವ್ ಪೇಶ್ವೆ, ಮುಖ್ಯ ಇಂಜಿನಿಯರ್ ಅವರ ವಿರುದ್ಧ ಲೋಕಾಯುಕ್ತ ತನಿಖೆಯನ್ನು ಕಾಯ್ದಿಟ್ಟು ದಿನಾಂಕ: 27–06–2012 ರಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅವರನ್ನು ಈ ಮೂಲಕ ಸೇವೆಯಿಂದ ಅಮಾನತ್ತಿನಲ್ಲಿಡುತ್ತದೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಎನ್. ಲಕ್ಷ್ಮಣ್‌ರಾವ್ ಪೇಶ್ವೆ, ಮುಖ್ಯ ಇಂಜಿನಿಯರ್, ಅವರು ಕೆ.ಸಿ.ಎಸ್.ಆರ್. ನಿಯಮ 98 ರನ್ವಯ ಜೀವನಾಧಾರ ಭತ್ಯೆಯನ್ನು ಪಡೆಯುತ್ತಾರೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಎನ್. ಲಕ್ಷ್ಮಣ್‌ರಾವ್ ಪೇಶ್ವೆ, ಮುಖ್ಯ ಇಂಜಿನಿಯರ್ ಅವರು ಸಕ್ಷಮ ಪ್ರಾಧಿಕಾರದ ಲಿಖಿತ ಅನುಮತಿಯಿಲ್ಲದೆ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಕೆ. ಲಕ್ಮೀನಾರಾಯಣ ರಾವ್

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1865 ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ: ಶ್ರೀಮತಿ ಸ್ವರ್ಣಲತ ಎಂ.ಭಂಡಾರೆ, ಸರ್ಕಾರದ ಉಪ ಕಾರ್ಯದರ್ಶಿ, ಶಿಕ್ಷಣ ಇಲಾಖೆ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ.

ಓದಲಾಗಿದೆ: ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ:ಲೋಕ್/ ಐಎನ್‌ವಿ(ಜಿ)/ ಸಿಟಿ/ಕ್ರೈಂ.59/2012, ದಿನಾಂಕ:06/07/2012.

ಪ್ರಸ್ತಾವನೆ:

ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಮೇಲೆ ಓದಲಾದ ಪತ್ರದಲ್ಲಿ ಬಾತ್ಮೀದಾರ ಶ್ರೀ ಗಿರೀಶ್ ಮ. ಖಡೇದ್, ಹೊಸೂರು ಗ್ರಾಮ, ಹುಕ್ಕೇರಿ ತಾಲ್ಲೂಕು, ಬೆಳಗಾಂ ಜಿಲ್ಲೆ, ಇವರು ಲೋಕಾಯುಕ್ತ ಕಛೇರಿಗೆ ಹಾಜರಾಗಿ ತಾವು ಆದರ್ಶ ಎಂಬ ಹೆಸರಿನ ಕನ್ನಡ ಮಾಧ್ಯಮ ಪ್ರಾಥಮಿಕ ಪಾಠಶಾಲೆಯ ನಿರ್ದೇಶಕರಾಗಿದ್ದು, ಸದರಿ ಶಾಲೆಗೆ ಅನುದಾನ ಬಿಡುಗಡೆಗೆ ಸಂಬಂಧಿಸಿದ ಕಡತವನ್ನು ಆರೋಪಿತ ಅಧಿಕಾರಿ ಶ್ರೀಮತಿ ಸ್ವರ್ಣಲತ ಎಂ.ಭಂಡಾರೆ ಉಪ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಇವರ ಕಛೇರಿಯಲ್ಲಿ ಮೇ 2012ರಿಂದ ಸಹಿಗಾಗಿ ಬಾಕಿ ಇದ್ದು, ತಾವು ಹಣ ಕೊಡದ ಕಾರಣ ಸಹಿಯಾಗಿರುವುದಿಲ್ಲ, ಹಲವಾರು ಜನ ಕವರಿನಲ್ಲಿ ಹಣ ಕೊಟ್ಟು ಕೆಲಸಮಾಡಿಸಿಕೊಂಡು ಹೋಗುತ್ತಿದ್ದು, ಅದೇ ರೀತಿ ತಾವೂ ಸಹ ಹಣ ನೀಡಿ ಕೆಲಸ ಮಾಡಿಸಿಕೊಳ್ಳಿ ಎಂದು ಆಪಾದಿತ ಅಧಿಕಾರಿ ಹೇಳಿದ್ದರಿಂದ ಬೇಸತ್ತ ಬಾತ್ಮೀದಾರರಾದ ಶ್ರೀ ಗಿರೀಶ್ ಎಂ.ಖಡೇದ್, ಇವರು ತಕ್ಷಣ ಆಪಾದಿತ ಅಧಿಕಾರಿಯ ಕಛೇರಿಯ ಶೋಧ ಮಾಡಿ ಅವರ ವಿರುದ್ಧ ಸೂಕ್ತ ಕಾನೂನು ರೀತ್ಯ ಕ್ರಮ ಜರುಗಿಸುವಂತೆ ದೂರು ನೀಡಿದ್ದರ ಮೇರೆಗೆ ಕರ್ನಾಟಕ ಸರ್ಕಾರ ಸಚಿವಾಲಯದ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಸ್ವರ್ಣಲತ ಎಂ. ಭಂಡಾರೆ, ಉಪ ಕಾರ್ಯದರ್ಶಿ, ಇವರ ಕಛೇರಿಗೆ ದಿನಾಂಕ;04.07.2012ರಂದು ಲೋಕಾಯುಕ್ತ ಪೊಲೀಸರು ದಾಳಿ ಮಾಡಿ ಪರಿಶೀಲಿಸಿದಾಗ ಶ್ರೀಮತಿ ಸ್ವರ್ಣಲತ ಎಂ.ಭಂಡಾರೆರವರು ಸರ್ಕಾರದ ಅನುದಾನ ಪಡೆದುಕೊಳ್ಳುವ ಸಲುವಾಗಿ ಅರ್ಜಿ ಸಲ್ಲಿಸಿರುವ ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿಯ ಸದಸ್ಯರು ಮತ್ತು ಶಾಲೆಯ ಅಧಿಕಾರಿಗಳಿಂದ ಅಕ್ರಮವಾಗಿ ಲಂಚದ ಹಣವನ್ನು ವಸೂಲಿ ಮಾಡುತ್ತಿರುವುದು ಅವರ ಕಛೇರಿಯ ಪೀಠೋಪಕರಣದ ಅಲ್ಮೇರಾ ಮತ್ತು ಅವರ ವ್ಯಾನಿಟಿ ಬ್ಯಾಗುಗಳನ್ನು ಶೋಧಿಸಿದಾಗ ರೂ.93,870/–(ತೊಂಭತ್ಮೂರು ಸಾವಿರದ ಎಂಟನೂರ ಎಪ್ಪತ್ತು ರೂಪಾಯಿಗಳು) ಅಕ್ರಮ ಸಂಭಾವನೆಯ ಹಣ ಆಪಾದಿತರ ಬಳಿ ಪತ್ತೆಯಾಗಿರುತ್ತದೆ.

ಇದರಿಂದಾಗಿ ಇವರು ಅಕ್ರಮವಾಗಿ ಲಂಚದ ಹಣ ಪಡೆದಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ. ಆದ್ದರಿಂದ ಇವರ ವಿರುದ್ಧ ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆ 1988ರ ಕಲಂ 7, 13(1)(ಡಿ) ಸಹವಾಚನ ಕಲಂ 13(2)ರನ್ವಯ ಬೆಂಗಳೂರು ನಗರ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:59/2012ರಡಿ ಪ್ರಕರಣ ದಾಖಲಿಸಿಕೊಂಡು ಆರೋಪಿತ ಅಧಿಕಾರಿಯನ್ನು ದಸ್ತಗಿರಿ ಮಾಡಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ವರದಿ ಮಾಡಿರುತ್ತಾರೆ.

ಆದ್ದರಿಂದ ಆರೋಪಿತರಾದ ಶ್ರೀಮತಿ ಸ್ವರ್ಣಲತ ಎಂ. ಭಂಡಾರೆ, ಉಪ ಕಾರ್ಯದರ್ಶಿ ಇವರ ವಿರುದ್ಧದ ಭ್ರಷ್ಟಾಚಾರ ಆರೋಪಗಳು ಮತ್ತು ಆಪಾದನೆಗಳು ದೊರೆತಿರುವ ಸಾಕ್ಷ್ಯಾಧಾರಗಳಿಂದ ಸಾಬೀತಾಗಿರುವುದರಿಂದ ಸದರಿ ಅಧಿಕಾರಿಯು ಅದೇ ಹುದ್ದೆಯಲ್ಲಿಯೇ ಮುಂದುವರೆದರೆ ತನಿಖೆಯ ಹಾದಿಯನ್ನು ತಪ್ಪಿಸುವ ಮತ್ತು ಸಾಕ್ಷ್ಯಾಧಾರಗಳನ್ನು ನಾಶಪಡಿಸುವ ಅವಕಾಶಗಳಿರುವುದರಿಂದ ಇವರನ್ನು ತಕ್ಷಣವೇ ಸೇವೆಯಿಂದ ಅಮಾನತ್ತುಗೊಳಿಸಿ, ಇವರ ಲೀನ್(ಸ್ಥಾನವನ್ನು) ಬೇರೆ ಕಡೆ ವರ್ಗಾಯಿಸುವಂತೆ ಕೋರಿರುತ್ತಾರೆ.

ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಆಪಾದಿತರು ಎಸಗಿರುವ ದುಷ್ಕೃತ್ಯಗಳು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸುವುದು ಸೂಕ್ತವೆಂದು ಸರ್ಕಾರವು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 8 ಸೇಇವಿ 2012(ಭಾಗ–1), ದಿನಾಂಕ:10.07.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯದ ಶಿಕ್ಷಣ ಇಲಾಖೆಯಲ್ಲಿ ಉಪ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಸ್ವರ್ಣಲತ ಎಂ. ಭಂಡಾರೆ, ಇವರ ಕಛೇರಿಯ ಮೇಲೆ ದಿನಾಂಕ:4.7.2012ರಂದು ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಇವರು ಪಡೆದಿರುವ ರೂ.93,870/–(ತೊಂಬತ್ಮೂರು ಸಾವಿರದ ಎಂಟನೂರ ಎಪ್ಪತ್ತು ರೂಪಾಯಿಗಳು) ಅಕ್ರಮ ಸಂಭಾವನೆಯನ್ನು ಪತ್ತೆ ಹಚ್ಚಿ ಅಧಿಕಾರಿಯನ್ನು ಬಂಧಿಸಿ ದಿನಾಂಕ:04.07.2012ರಿಂದ 48ಘಂಟೆಗಳಿಗೂ ಹೆಚ್ಚುಕಾಲ ನ್ಯಾಯಾಂಗ ಬಂಧನದಲಿದ್ದುದರಿಂದ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು, ದಿನಾಂಕ:4.7.2012ರಿಂದಲೇ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರ ನಿಯಮ 10(1)(ಎಎ) ಮತ್ತು 10(2)(ಎ)ರನ್ವಯ ಶ್ರೀಮತಿ ಸ್ವರ್ಣಲತ ಎಂ.ಭಂಡಾರೆ, ಉಪ ಕಾರ್ಯದರ್ಶಿ,ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಸಚಿವಾಲಯ, ಇವರನ್ನು ಈ ಮೂಲಕ ಸರ್ಕಾರಿ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

ಸದರಿ ಅಧಿಕಾರಿಗಳ ಲೀನ್‌ನ್ನು ಶಿಕ್ಷಣ ಇಲಾಖೆಯಿಂದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಸೇವೆಗಳು–ಇ) ಶಾಖೆಗೆ ಹಿಂಪಡೆಯಲಾಗಿದೆ. ಅಮಾನತ್ತಿನ ಅವಧಿಯಲ್ಲಿ ಆರೋಪಿತ ಅಧಿಕಾರಿಯು ಕರ್ನಾಟಕ ನಾಗರಿಕ ಸೇವಾ ನಿಯಮಗಳು 1958ರ ನಿಯಮ(98)ರನ್ವಯ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ. ಇವರು ಅಮಾನತ್ತಿನ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಲಿಖಿತ ಅನುಮತಿಯಿಲ್ಲದೆ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಕೆ. ಲಕ್ಮೀನಾರಾಯಣ ರಾವ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

ಪಿ.ಆರ್. 1866

ಆರ್ಥಿಕ ಸಚಿವಾಲಯ

ವಿಷಯ : ರಾಜ್ಯ ಸರ್ಕಾರದ ಆಸ್ತಿ–ಋಣ ನಿರ್ವಹಿಸಲು ಖಜಾನೆ–II ಯೋಜನೆಯಡಿ ಸಮಾಲೋಚಕರುಗಳಿಗೆ ಶುಲ್ಕ ಪಾವತಿಸುವ ಬಗ್ಗೆ –

ಓದಲಾಗಿದೆ :

1. ಸರ್ಕಾರದ ಆದೇಶ ಸಂ. ಆಇ 27307 ಮುಂಗಡ 2011, ದಿನಾಂಕ:13–12–2011.
2. ಸರ್ಕಾರದ ಆದೇಶ ಸಂ. ಆಇ 27307 ಮುಂಗಡ 2011, ದಿನಾಂಕ:12–1–2012.
3. ಸರ್ಕಾರದ ಪತ್ರ ಸಂ. ಎಫ್‌ಡಿ 5 ಎಸ್‌ಒಎಫ್‌ಸಿ 2011, ದಿನಾಂಕ:19–6–2012.

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯ ಸರ್ಕಾರದ ಆಸ್ತಿ–ಋಣ ನಿರ್ವಹಣೆಗಾಗಿ ಖಜಾನೆ–II ಯೋಜನೆಯಡಿ ಡಾಟಾಬೇಸ್ ಸಿದ್ಧಪಡಿಸುವ ಮತ್ತು ಆರ್ಥಿಕ ಲೆಕ್ಕಗಳಲ್ಲಿ ಬಾಕಿ ಮೊತ್ತಗಳೆಂದು ತೋರಿಸಲಾದ ಅಂಕಿ–ಅಂಶಗಳ ಹೊಂದಾಣಿಕೆ ಕಾರ್ಯದಲ್ಲಿ ಸರ್ಕಾರಕ್ಕೆ ನೆರವಾಗಲು ಆರು ತಿಂಗಳ ಅವಧಿಗೆ ಸಮಾಲೋಚಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಕೆಳಕಂಡವರಿಗೆ ಪ್ರತಿ ತಿಂಗಳು ಮಾಸಿಕ ವರದಿ ಸಲ್ಲಿಸಿದ ನಂತರ ಮಾಸಿಕ ತಲಾ ರೂ.25,000/– (ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ) ಶುಲ್ಕವನ್ನು ಪಾವತಿಸಲು ಸರ್ಕಾರದ ಮಂಜೂರಾತಿ ನೀಡಲಾಗಿತ್ತು.

ಕ್ರ.ಸಂ.	ಹೆಸರು
1	ಶ್ರೀ ಟಿ.ಎನ್. ನಾಗರಾಜನ್ ನಿವೃತ್ತ ಹಿರಿಯ ಲೆಕ್ಕಾಧಿಕಾರಿ, ಮಹಾಲೇಖಪಾಲರ ಕಛೇರಿ
2	ಶ್ರೀ ಸಿ.ಎಂ. ರಘೋತ್ತಮ, ನಿವೃತ್ತ ಹಿರಿಯ ಲೆಕ್ಕಾಧಿಕಾರಿ, ಮಹಾಲೇಖಪಾಲರ ಕಛೇರಿ
3	ಶ್ರೀ ಕೆ. ವಾದಿರಾಜ್, ನಿವೃತ್ತ ಹಿರಿಯ ಲೆಕ್ಕಾಧಿಕಾರಿ, ಮಹಾಲೇಖಪಾಲರ ಕಛೇರಿ
4	ಶ್ರೀ ಕೆ.ವಿ. ವೆಂಕಟೇಶ್, ನಿವೃತ್ತ ಜಿಲ್ಲಾ ಖಜಾನಾಧಿಕಾರಿ

ಶ್ರೀ ಸಿ.ಕೆ. ಅನಂತನಾರಾಯಣ, ನಿವೃತ್ತ ಹಿರಿಯ ಸೂಪರ್‌ವೈಸರ್, ಇವರನ್ನು ಮೇಲ್ಕಂಡ 4 ಸಮಾಲೋಚಕರ ಜೊತೆಯಲ್ಲಿ ದಿನಾಂಕ: 1–1–2012ರಿಂದ 3 ತಿಂಗಳ ಅವಧಿಗೆ ಕಾರ್ಯನಿರ್ವಹಿಸಲು ನೇಮಿಸಿರುವುದರಿಂದ ಇವರಿಗೆ ಮಾಸಿಕ ರೂ.20,000/– ಪಾವತಿಸಲು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ ಅನುಮೋದನೆ ನೀಡಲಾಗಿತ್ತು.

ಈಗ ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ:19–6–2012ರ ಪತ್ರದಲ್ಲಿ ಕೆಳಕಂಡ 3 ಸಮಾಲೋಚಕರುಗಳನ್ನು ಮಾತ್ರ ದಿನಾಂಕ:1–4–2012 ರಿಂದ ಆರು ತಿಂಗಳು ಅಂದರೆ ದಿನಾಂಕ: 30–9–2012ರವರೆಗೆ ಮುಂದುವರೆಸಲಾಗಿದೆ.

ಕ್ರ. ಸಂ.	ಹೆಸರು	ಮಾಸಿಕ ಶುಲ್ಕ
1	ಶ್ರೀ ಟಿ.ಎನ್. ನಾಗರಾಜನ್ ನಿವೃತ್ತ ಹಿರಿಯ ಲೆಕ್ಕಾಧಿಕಾರಿ, ಮಹಾಲೇಖಪಾಲರ ಕಛೇರಿ	ರೂ.30,000/–
2	ಶ್ರೀ ಸಿ.ಎಂ. ರಘೋತ್ತಮ, ನಿವೃತ್ತ ಹಿರಿಯ ಲೆಕ್ಕಾಧಿಕಾರಿ, ಮಹಾಲೇಖಪಾಲರ ಕಛೇರಿ	ರೂ.25,000/–
3	ಶ್ರೀ ಕೆ.ವಿ. ವೆಂಕಟೇಶ್, ನಿವೃತ್ತ ಜಿಲ್ಲಾ ಖಜಾನಾಧಿಕಾರಿ	ರೂ.25,000/–

ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರ ಮುಂದಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ. ಆಇ 27307 ಮುಂಗಡ 2011, ಬೆಂಗಳೂರು, ದಿನಾಂಕ: 23–6–2012.

ರಾಜ್ಯ ಸರ್ಕಾರದ ಆಸ್ತಿ–ಋಣ ನಿರ್ವಹಣೆಗಾಗಿ ಖಜಾನೆ–II ಯೋಜನೆಯಡಿ ಡಾಟಾಬೇಸ್ ಸಿದ್ಧಪಡಿಸುವ ಮತ್ತು ಆರ್ಥಿಕ ಲೆಕ್ಕಗಳಲ್ಲಿ ಬಾಕಿ ಮೊತ್ತಗಳೆಂದು ತೋರಿಸಲಾದ ಅಂಕಿ–ಅಂಶಗಳ ಹೊಂದಾಣಿಕೆ ಕಾರ್ಯದಲ್ಲಿ ಸರ್ಕಾರಕ್ಕೆ ನೆರವಾಗಲು ದಿನಾಂಕ:1–4–2012ರಿಂದ 6 ತಿಂಗಳ ಅವಧಿಗೆ ಸಮಾಲೋಚಕರಾಗಿ ಮುಂದುವರೆದಿರುವ ಕೆಳಕಂಡವರಿಗೆ ಪ್ರತಿ ತಿಂಗಳು ಮಾಸಿಕ ವರದಿ ಸಲ್ಲಿಸಿದ ನಂತರ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಶುಲ್ಕವನ್ನು ಪಾವತಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಕ್ರ. ಸಂ.	ಹೆಸರು	ಮಾಸಿಕ ಶುಲ್ಕ
1	ಶ್ರೀ ಟಿ.ಎನ್. ನಾಗರಾಜನ್ ನಿವೃತ್ತ ಹಿರಿಯ ಲೆಕ್ಕಾಧಿಕಾರಿ, ಮಹಾಲೇಖಪಾಲರ ಕಛೇರಿ	ರೂ.30,000/–

ಕ್ರ. ಸಂ.	ಹೆಸರು	ಮಾಸಿಕ ಶುಲ್ಕ
2	ಶ್ರೀ ಸಿ.ಎಂ. ರಘೋತ್ತಮ, ನಿವೃತ್ತ ಹಿರಿಯ ಲೆಕ್ಕಾಧಿಕಾರಿ, ಮಹಾಲೇಖಪಾಲರ ಕಛೇರಿ	ರೂ.25,000/–
3	ಶ್ರೀ ಕೆ.ವಿ. ವೆಂಕಟೇಶ್, ನಿವೃತ್ತ ಜಿಲ್ಲಾ ಖಜಾನಾಧಿಕಾರಿ	ರೂ.25,000/–

ಈ ಸಂಬಂಧ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ '2047–00–103–0–01–051 ಸಾಮಾನ್ಯ ವೆಚ್ಚಗಳು' ಅಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಲಕ್ಷ್ಮಣ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1883 ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಆರ್ಥಿಕ ಸಚಿವಾಲಯ

ವಿಷಯ: ಶ್ರೀ ಎಸ್.ಎಂ. ಇಕ್ಬಾಲ್ ಮಿಯಾನ್, ಜಿಲ್ಲಾ ವಿಮಾಧಿಕಾರಿ ಮತ್ತು ಶ್ರೀ ರವಿಚಂದು ರಾಠೋಡ್, ದ್ವಿ.ದ.ಸ. ಜಿಲ್ಲಾ ವಿಮಾ ಕಛೇರಿ, ಬೀದರ್, ಇವರುಗಳ ಮೇಲಿನ ಲೋಕಾಯುಕ್ತ ಟ್ರ್ಯಾಪ್ ಪ್ರಕರಣದಲ್ಲಿ ಪರಿಷ್ಕೃತ ಅಭಿಯೋಜನಾ ಮಂಜೂರಾತಿ ನೀಡುವ ಕುರಿತು.

ಓದಲಾಗಿದೆ:

1. ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ನಿರ್ದೇಶಕರ ಪತ್ರ ಸಂ.ವಿನಿ.ಸಿಶಾ. ಲೋಕಾ/1360/2010–11, ದಿನಾಂಕ:04–10–2010.
2. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ:ಲೋಕ್/ಐಎನ್‌ವಿ(ಜಿ)/ಜಿ–39/ಸಿಆರ್– 4/2010/ ಬೀದರ್, ದಿನಾಂಕ:21–03–2012.
3. ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ವಾಯ್ಸ್ ರೆಕಾರ್ಡ್‌ನಲ್ಲಿ ದಾಖಲಾದ ಸಂಭಾಷಣೆಯ ವಿವರಗಳು.
4. ಸರ್ಕಾರದ ಆದೇಶ ಸಂಖ್ಯೆ: ಆಇ 41 ಕವಿಇ 2010, ದಿನಾಂಕ:16.05.2012.
5. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ:ಲೋಕ್/ಐಎನ್‌ವಿ(ಜಿ)/ಜಿ–39/ಸಿಆರ್– 4/2010/ ಬೀದರ್, ದಿನಾಂಕ:30–05–2012.

ಪ್ರಸ್ತಾವನೆ:

ಶ್ರೀ ಎಸ್.ಎಂ. ಇಕ್ಬಾಲ್ ಮಿಯಾನ್, ಜಿಲ್ಲಾ ವಿಮಾಧಿಕಾರಿ, ಮತ್ತು ಶ್ರೀ ರವಿಚಂದು ರಾಠೋಡ್, ದ್ವಿ.ದ.ಸ. ಇವರುಗಳು ಜಿಲ್ಲಾ ವಿಮಾಧಿಕಾರಿಗಳ ಕಛೇರಿ, ಬೀದರ್, ಈ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ, ದಿನಾಂಕ:3.8.2010 ರಂದು ಫಿರ್ಯಾದಿ ಶ್ರೀ ಎಂ. ಮೋಯಿನ ಪಾಶಾ ರವರಿಂದ ರೂ.500/– ಲಂಚದ ಹಣ ಸ್ವೀಕಾರ ಆರೋಪಕ್ಕೆ ಸಂಬಂಧಿಸಿದಂತೆ, ಇವರುಗಳ ವಿರುದ್ಧ ಕರ್ನಾಟಕ ಲೋಕಾಯುಕ್ತ, ಬೀದರ್, ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:4/2010 ದಾಖಲಾಗಿರುತ್ತದೆ. ಅಪರ ಪೊಲೀಸ್ ಮಹಾ ನಿರ್ದೇಶಕರು, ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಎಸ್.ಎಂ. ಇಕ್ಬಾಲ್ ಮಿಯಾನ್, ಜಿಲ್ಲಾ ವಿಮಾಧಿಕಾರಿ, ಮತ್ತು ಶ್ರೀ ರವಿಚಂದು ರಾಠೋಡ್, ದ್ವಿ.ದ.ಸ. ಇವರುಗಳ ವಿರುದ್ಧ ಭ್ರಷ್ಟಾಚಾರ ನಿರೋಧಕ ಅಧಿನಿಯಮ, 1988ರ ಕಲಂ 7, 13(1)(ಡಿ) ಸಹವಾಚ 13 (2) ರಡಿ ಮತ್ತು ಐಪಿಸಿ ಕಲಂ 120 (ಬಿ) ರಡಿ ದಾಖಲಾದ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ನಿರೋಧಕ ಅಧಿನಿಯಮ, 1988ರ ಕಲಂ 19(1)(ಬಿ)ರಡಿ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಪತ್ರದೊಂದಿಗೆ ಕಳುಹಿಸಿಕೊಟ್ಟ ತನಿಖಾ ವರದಿ ಮತ್ತು ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1. ಶ್ರೀ ಎಂ. ಮೋಯಿನಪಾಶಾ, ಸರ್ಕಾರಿ ಬಾಲಕರ ಪದವಿಪೂರ್ವ (ಬಾಲಕರ) ಕಾಲೇಜ್, ಬೀದರ್, ಇವರ ಫಿರ್ಯಾದಿ ದಿನಾಂಕ: 03.08.2010.
2. ಪ್ರಥಮ ವರ್ತಮಾನ ವರದಿ ಬೀದರ್ ಲೋಕಾಯುಕ್ತ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ:4/2010, ದಿನಾಂಕ:03.08.2010.
3. ಲೋಕಾಯುಕ್ತ ಕಛೇರಿಯಲ್ಲಿ ಪಂಚನಾಮೆ ದಿನಾಂಕ: 03.08.2010,
4. ಟ್ರ್ಯಾಪ್‌ನ ಪಂಚನಾಮೆ ದಿನಾಂಕ: 03.08.2010,
5. ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ: PHI/CME/LOK/73/10–11, ದಿನಾಂಕ: 21.08.2010,
6. ಘಟನೆ ನಡೆದ ಸ್ಥಳದ ನಕಾಶೆ: ಜಿಲ್ಲಾ ವಿಮಾಧಿಕಾರಿಗಳ ಕಛೇರಿ, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ. ಬೀದರ್,
7. ಕೆಳಕಂಡ ಸಾಕ್ಷಿಗಳ ಹೇಳಿಕೆ, ಮರುಹೇಳಿಕೆಗಳನ್ನು ಪರಿಶೀಲಿಸಲಾಗಿದೆ;

    i. ಶ್ರೀ ಎಂ. ಮೋಯಿನಪಾಶಾ ತಂದೆ ಜಾನಿಮಿಯ್ಯಾ, ಉಪನ್ಯಾಸಕರು, ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜ್, ಬೀದರ್.
    ii. ಶ್ರೀ ಶಂಕರ್ ತಂದೆ ಅಮೃತ, ದ್ವಿ.ದ.ಸ. ಜಿಲ್ಲಾ ಸಾರ್ವಜನಿಕ ಆಸ್ಪತ್ರೆ, ಬೀದರ್.
    iii. ಶ್ರೀ ವಿಜಯ್‌ಕುಮಾರ ತಂದೆ ರಾಮಚಂದ್ರ ಇನಾಮದಾರ್, ಮೆಕ್ಯಾನಿಕ್ ಇನ್ ಆಟೋಮೊಬೈಲ್, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜ್, ಬೀದರ್.
    iv. ಶ್ರೀಮತಿ ಗಾದಗಿಕರ್ ಕಮಲಾ ತಂದೆ ಸಿದ್ರಾಮಪ್ಪ, ಅಧೀಕ್ಷಕರು, ಜಿಲ್ಲಾ ವಿಮಾಧಿಕಾರಿ, ಬೀದರ್.
    v. ಶ್ರೀ ಕೆ. ರಂಗಸ್ವಾಮಿ, ಪೌರಾಯುಕ್ತರು, ನಗರ ಸಭೆ, ಬೀದರ್, ಸಾ. ಹಾಸನ ಜಿಲ್ಲೆ.
    vi. ಶ್ರೀ ಪ್ರಕಾಶ್ ತಂದೆ ಕಾರ್ತಿಕ ಸ್ವಾಮಿ ಮಠಪತಿ, ಸಹಾಯಕ ಅಭಿಯಂತರರು ಲೋಕೋಪಯೋಗಿ ಇಲಾಖೆ, ಬೀದರ್.
    vii. ಶ್ರೀ ಯಶವಂತರಾವ್ ತಂದೆ ಧರ್ಮರಾವ್ ಮಾಲಿಪಾಟೀಲ್, ದ್ವಿ.ದ.ಸ. ಜಿಲ್ಲಾ ವಿಮಾಧಿಕಾರಿಗಳ ಕಛೇರಿ, ಗುಲ್ಬರ್ಗಾ, ಸಾ ಗೊಬ್ಬೂರ (ಬಿ) ಅಫಜಲಪೂರ ತಾಲ್ಲೂಕು, ಗುಲ್ಬರ್ಗಾ ಜಿಲ್ಲೆ.
    viii. ಶ್ರೀ ಡೊಂಗರೆ ಭೀಮರಾವ್ ತಂದೆ ನಾಮದೇವರಾವ್, ಪ್ರಾಚಾರ್ಯರು, ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜ್, ಬೀದರ್.
    ix. ಶ್ರೀ ನಾಗಶೆಟ್ಟಿ ತಂದೆ ಶಂಕ್ರೆಪ್ಪ, ಪೊಲೀಸ್ ಹೆಡ್ ಕಾನ್‌ಸ್ಟೇಬಲ್, ಲೋಕಾಯುಕ್ತ ಪೊಲೀಸ್ ಠಾಣೆ, ಬೀದರ್.
    x. ಶ್ರೀ ಮಾಣಿಕಪ್ಪ ತಂದೆ ಬಂಡೆಪ್ಪ, ಪೊಲೀಸ್ ಹೆಡ್‌ಕಾನ್‌ಸ್ಟೇಬಲ್, ಲೋಕಾಯುಕ್ತ ಪೊಲೀಸ್ ಠಾಣೆ, ಬೀದರ್.
    xi. ಶ್ರೀ ನಾಗನಾಥ ತಂದೆ ಬಸವರಾಜ್ ಹೊಸಾಳೆ, ಪೊಲೀಸ್ ಕಾನ್‌ಸ್ಟೇಬಲ್, ಲೋಕಾಯುಕ್ತ ಪೊಲೀಸ್ ಠಾಣೆ, ಬೀದರ್.
    xii. ಶ್ರೀ ಶ್ರೀಕಾಂತ ತಂದೆ ವಿಶ್ವನಾಥ, ಪೊಲೀಸ್ ಕಾನ್‌ಸ್ಟೇಬಲ್, ಲೋಕಾಯುಕ್ತ ಪೊಲೀಸ್ ಠಾಣೆ, ಬೀದರ್.
    xiii. ಶ್ರೀ ಶಿವಕುಮಾರ್ ತಂದೆ ಬಕ್ಕಪ್ಪ, ಪೊಲೀಸ್ ಕಾನ್‌ಸ್ಟೇಬಲ್, ಲೋಕಾಯುಕ್ತ ಪೊಲೀಸ್ ಠಾಣೆ, ಬೀದರ್.
    xiv. ಶ್ರೀ ರೇವಣಸಿದ್ದಪ್ಪ ತಂದೆ ವೀರಪ್ಪ, ಪೊಲೀಸ್ ಕಾನ್‌ಸ್ಟೇಬಲ್, ಲೋಕಾಯುಕ್ತ ಪೊಲೀಸ್ ಠಾಣೆ, ಬೀದರ್.
    xv. ಶ್ರೀ ಪಂಡಿತ್ ಬಿನ್ ಫಾಳೆಪ್ಪ, ಸಶಸ್ತ್ರ ಪೊಲೀಸ್ ಕಾನ್‌ಸ್ಟೇಬಲ್, ಪೊಲೀಸ್ ಉಪಾಧೀಕ್ಷಕರು, ಲೋಕಾಯುಕ್ತ, ಬೀದರ್‌ರವರ ವಾಹನ ಚಾಲಕರು.
    xvi. ಶ್ರೀ ಚಂದ್ರಕಾಂತ ತಂದೆ ದೇವಿದಾಸ್, ಸಶಸ್ತ್ರ ಪೊಲೀಸ್ ಕಾನ್‌ಸ್ಟೇಬಲ್, ಕರ್ನಾಟಕ ಲೋಕಾಯುಕ್ತ, ಬೀದರ್.

8. ಶ್ರೀ ಎಂ. ಮೋಯಿನಪಾಶಾ ತಂದೆ ಜಾನಿಮಿಯ್ಯಾ, ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ (ಬಾಲಕರ) ಕಾಲೇಜ್, ಬೀದರ್, ಇವರ ವಿಮಾ ಪಾಲಿಸಿ ಸಂಖ್ಯೆ:1117631ರ ಮೇಲೆ ಸಾಲ ಪಡೆಯುವ ಸಲುವಾಗಿ ಲಂಚ ಪಡೆದ ಆರೋಪಗಳ ವಿವರ.

9. ಶ್ರೀ ಎಸ್.ಎಂ. ಇಕ್ಬಾಲ್ ಮಿಯಾನ್, ಜಿಲ್ಲಾ ವಿಮಾಧಿಕಾರಿ, ಬೀದರ್, ಮತ್ತು ಶ್ರೀ ರವಿಚಂದು ರಾಠೋಡ್, ದ್ವಿ.ದ.ಸ. ಜಿಲ್ಲಾ ವಿಮಾಧಿಕಾರಿ ಕಛೇರಿ, ಬೀದರ್, ಇವರುಗಳು ದಿನಾಂಕ:03.08.2010 ರಂದು ನೀಡಿದ ಸಮಜಾಯಿಷಿ.

ತನಿಖಾಧಿಕಾರಿಗಳಾದ ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೀದರ್, ಇವರು ಶ್ರೀ ಎಸ್.ಎಂ. ಇಕ್ಬಾಲ್ ಮಿಯಾನ್, ಜಿಲ್ಲಾ ವಿಮಾಧಿಕಾರಿ, ಮತ್ತು ಶ್ರೀ ರವಿಚಂದು ರಾಠೋಡ್, ದ್ವಿ.ದ.ಸ. ಇವರುಗಳ ವಿರುದ್ಧ ದಂಡನಾರ್ಹ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ, ಬೀದರ್, ಆರಕ್ಷಕ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ:4/2010ರಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 7, 13 (1) (ಡಿ) ಸಹವಾಚ 13 (2)ರಡಿ ಮತ್ತು ಐ.ಪಿ.ಸಿ. ಕಲಂ 120 (ಬಿ)ರಡಿ ದಾಖಲಿಸಿಕೊಂಡಿರುತ್ತಾರೆ.

ವಿಮಾದಾರರಾದ ಶ್ರೀ ಎಂ. ಮೋಯಿನಪಾಶಾ, ಉಪನ್ಯಾಸಕರು, ಸರ್ಕಾರಿ ಬಾಲಕರ ಪದವಿ ಪೂರ್ವ (ಬಾಲಕರ) ಕಾಲೇಜ್, ಬೀದರ್, ಇವರು ಹೊಂದಿದ್ದ ಪಾಲಿಸಿ ನಂ.1117631ರ ಮೇಲೆ ರೂ.50,000/- ಸಾಲ ಪಡೆಯಲು ಜಿಲ್ಲಾ ವಿಮಾಧಿಕಾರಿಗಳ ಕಛೇರಿ, ಬೀದರ್ ಇಲ್ಲಿ ಅರ್ಜಿ ಸಲ್ಲಿಸಿದ್ದು, ಅರ್ಜಿಯನ್ನು ಇತ್ಯರ್ಥಪಡಿಸಲು ಆಪಾದಿತರಾದ ಶ್ರೀ ಎಸ್.ಎಂ. ಇಕ್ಬಾಲ್ ಮಿಯಾನ್, ಜಿಲ್ಲಾ ವಿಮಾಧಿಕಾರಿ, ಮತ್ತು ಶ್ರೀ ರವಿಚಂದು ರಾಠೋಡ್, ದ್ವಿ.ದ.ಸ. ಇವರುಗಳು ರೂ.500/- ಲಂಚಕ್ಕೆ ಬೇಡಿಕೆ ಸಲ್ಲಿಸಿರುತ್ತಾರೆ. ಲಂಚವನ್ನು ಕೊಡಲು ಬಯಸದೇ ಶ್ರೀ ಎಂ. ಮೋಯಿನಪಾಶಾರವರು ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದಿನಾಂಕ: 03.08.2010 ರಂದು ದೂರು ನೀಡಿರುತ್ತಾರೆ. ಈ ದೂರನ್ನು ಆಧರಿಸಿ ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೀದರ್, ಇವರು ಕಾನೂನು ರೀತಿ ಪೂರ್ವಭಾವಿ ಕ್ರಮ ಕೈಗೊಂಡಿರುತ್ತಾರೆ. ಜಿಲ್ಲಾ ವಿಮಾಧಿಕಾರಿಗಳ ಕಛೇರಿ, ಬೀದರ್, ಇಲ್ಲಿ ದಿನಾಂಕ: 03.08.2010 ರಂದು ಶ್ರೀ ಎಸ್.ಎಂ. ಇಕ್ಬಾಲ್ ಮಿಯಾನ್, ಜಿಲ್ಲಾ ವಿಮಾಧಿಕಾರಿ, ಮತ್ತು ಶ್ರೀ ರವಿಚಂದು ರಾಠೋಡ್, ದ್ವಿ.ದ.ಸ. ಇವರುಗಳು ರೂ.500/- ಲಂಚ ಹಣವನ್ನು ನೆರಳು ಸಾಕ್ಷಿಯಾದ ಶ್ರೀ ಶಂಕರ್ ರವರ ಸಮಕ್ಷಮದಲ್ಲಿ ಫಿರ್ಯಾದಿ ಶ್ರೀ ಎಂ. ಮೋಯಿನಪಾಶರವರಿಂದ ಪಡೆಯುವಾಗ ಸಿಕ್ಕಿಬಿದ್ದಿರುತ್ತಾರೆ. ಪ್ರಕರಣದ ತನಿಖಾಧಿಕಾರಿಗಳು, ಶ್ರೀ ರವಿಚಂದು ರಾಠೋಡ್‌ರವರ ಶರ್ಟಿನ ಎಡಭಾಗದ ಜೇಬಿನಿಂದ ರೂ.100/- ಮುಖಬೆಲೆಯ 5 ನೋಟುಗಳನ್ನು [2HH 107733, 2AD 580682, 9KU 371339, 2KF 923025 & 2AD 580683] ವಶಪಡಿಸಿಕೊಂಡಿರುತ್ತಾರೆ. ಆರೋಪಿಯಿಂದ ವಶಪಡಿಸಿಕೊಳ್ಳಲಾದ ರೂ.100/- ಮುಖ ಬೆಲೆಯ ಒಟ್ಟು ಐದು ನೋಟುಗಳ ಕ್ರಮ ಸಂಖ್ಯೆಗಳು ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದಿಸಿದ ನೋಟುಗಳ ಕ್ರಮ ಸಂಖ್ಯೆಗಳಿಗೆ ತಾಳೆಯಾಗಿದೆ. ಶ್ರೀ ರವಿಚಂದು ರಾಠೋಡ್‌ರವರ ಕೈಗಳನ್ನು, ಷರ್ಟು ಜೇಬುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಸಿದಾಗ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿದೆ. ಈ ಪರೀಕ್ಷೆಗಳು ರಾಸಾಯನಿಕ ಪರೀಕ್ಷಕರು ದಿನಾಂಕ:21-8-2010ರಂದು ನೀಡಿರುವ ಪರೀಕ್ಷಣಾ ವರದಿಯಲ್ಲಿಯೂ ದೃಢಪಟ್ಟಿದೆ. ಶ್ರೀ ಎಸ್.ಎಂ. ಇಕ್ಬಾಲ್ ಮಿಯಾನ್ ವಿರುದ್ಧ ಎಫ್‌ಐಆರ್‌ನಲ್ಲಿ ದೂರು ದಾಖಲಿಸಿರುವ ಅಂಶ, ವಾಯ್ಸ್ ರೆಕಾರ್ಡ್‌ನಲ್ಲಿ ಲಂಚದ ಹಣಕ್ಕೆ ಬೇಡಿಕೆ ಸಲ್ಲಿಸಿರುವುದು ದಾಖಲಾಗಿರುವ ಅಂಶ, ಲಂಚದ ಹಣವನ್ನು ಅಧೀನ ಸಿಬ್ಬಂದಿಯಾದ ಶ್ರೀ ರಾಠೋಡ್ ರವರಿಗೆ ಕೊಡಿಸಿರುವ ಅಂಶಗಳು ಮತ್ತು ನೆರಳುಸಾಕ್ಷಿಯಾದ ಶ್ರೀ ಶಂಕರ್‌ರವರ ಹೇಳಿಕೆಗಳಿಂದ ಆರೋಪಿತರ ವಿರುದ್ಧ ಭ್ರಷ್ಟಾಚಾರ ನಿರೋಧಕ ಅಧಿನಿಯಮ 1988ರ ಕಲಂ 7, 13 (1)(ಡಿ) ಸಹವಾಚ 13 (2)ರಡಿ ಮತ್ತು ಐ.ಪಿ.ಸಿ ಕಲಂ 120 (ಬಿ)ರಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವ ಆರೋಪವು ಮೇಲ್ನೋಟಕ್ಕೆ ದೃಢಪಟ್ಟಂತಾಗಿರುವುದರಿಂದ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸುವುದು ಸೂಕ್ತವೆಂದು ಸರ್ಕಾರ ಮನಗಂಡಿದೆ.

ಸರ್ಕಾರವು ಸಹಾಯಕ ನಿರ್ದೇಶಕರು/ಜಿಲ್ಲಾ ವಿಮಾಧಿಕಾರಿಗಳನ್ನು ಕೆಲಸದಿಂದ ತೆಗೆದು ಹಾಕುವ ಅಧಿಕಾರ ಹೊಂದಿದೆ. ಶ್ರೀ ಎಸ್.ಎಂ. ಇಕ್ಬಾಲ್ ಮಿಯಾನ್, ಇವರು ಸೇವೆಯಲ್ಲಿದ್ದಾಗ ಭ್ರಷ್ಟಾಚಾರ ನಿರೋಧಕ ಅಧಿನಿಯಮ 1988ರ ಕಲಂ 7, 13 (1)(ಡಿ) ಸಹವಾಚ 13 (2)ರಡಿ ಮತ್ತು ಐ.ಪಿ.ಸಿ. ಕಲಂ 120 (ಬಿ)ರಡಿ ಎಸಗಿರುವ ಅಪರಾಧದ ಆರೋಪಕ್ಕಾಗಿ ಸದರಿ ಕಾಯ್ದೆಯ ಕಲಂ 19 (1)(ಬಿ)ರಡಿ ಅಭಿಯೋಜನೆಗೆ ಒಳಪಡಿಸಲು ಸಾಕಷ್ಟು ಆಧಾರಗಳು ಕಂಡುಬಂದಿರುವುದರಿಂದ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಿಸಲು ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮಂಜೂರಾತಿ ನೀಡಲಾಗಿತ್ತು.

ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ದಿನಾಂಕ:16.05.2012ರ ಆದೇಶದಲ್ಲಿ ಕೆಲವು ಪದಗಳು ತಪ್ಪಾಗಿ ನಮೂದಾಗಿರುವುದರಿಂದ ಅದನ್ನು ಸರಿಪಡಿಸಿ ಹೊಸದಾಗಿ ಅಭಿಯೋಜನಾ ಮಂಜೂರಾತಿ ಆದೇಶವನ್ನು ಹೊರಡಿಸುವಂತೆ ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ದಿನಾಂಕ:30.05.2012ರ ಪತ್ರದಲ್ಲಿ ಕೋರಿರುತ್ತಾರೆ. ಆದುದರಿಂದ, ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ದಿನಾಂಕ: 16.05.2012ರ ಆದೇಶವನ್ನು ಹಿಂಪಡೆದು ಕೆಳಕಂಡಂತೆ ಹೊಸ ಅಭಿಯೋಜನ ಮಂಜೂರಾತಿ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಇ 41 ಕವಿಇ 2010, ಬೆಂಗಳೂರು, ದಿನಾಂಕ: 28.06.2012

ಭ್ರಷ್ಟಾಚಾರ ನಿರೋಧಕ ಅಧಿನಿಯಮ, 1988ರ ಕಲಂ 19 (1)(ಬಿ)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಎಸ್.ಎಂ. ಇಕ್ಬಾಲ್ ಮಿಯಾನ್, ಜಿಲ್ಲಾ ವಿಮಾಧಿಕಾರಿ, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಚಿಕ್ಕಮಗಳೂರು, ಇವರನ್ನು ಸದರಿ ಕಾಯ್ದೆಯ ಕಲಂ 7, 13 (1)(ಡಿ) ಸಹವಾಚ 13 (2)ರ ಅಡಿ ಮತ್ತು ಐಪಿಸಿ ಕಲಂ 120 (ಬಿ)ರಡಿಯಲ್ಲಿ ಎಸಗಿದ ಅಪರಾಧದ ಆರೋಪಕ್ಕೆ ಸದರಿ ಕಾಯ್ದೆಯ ಕಲಂ 19 (1)(ಬಿ)ರಡಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಿಸಲು ಸರ್ಕಾರ ಈ ಮೂಲಕ ಮಂಜೂರಾತಿ ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ 19(1) ರನ್ವಯ ಈ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ನನ್ನ ಸಹಿಯ ಅಡಿಯಲ್ಲಿ ದಿನಾಂಕ: 28.06.2012 ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎನ್. ಲಕ್ಷ್ಮಣ

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಪಿ.ಆರ್. 1876

ಆರ್ಥಿಕ ಸಚಿವಾಲಯ

ವಿಷಯ: ಸರ್ಕಾರಿ ನೌಕರರಿಗೆ ಮಂಜೂರು ಮಾಡುತ್ತಿರುವ ವಿವಿಧ ಮುಂಗಡಗಳ ಮೊತ್ತವನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ:ಆಇ 13 ಮಕಮು 2008, ದಿನಾಂಕ: 14.08.2008.
2. ಸರ್ಕಾರಿ ಆದೇಶ ಸಂಖ್ಯೆ:ಆಇ 7 ಎಸ್‌ಆರ್‌ಪಿ 2012, ದಿನಾಂಕ: 21.04.2012.

ಪ್ರಸ್ತಾವನೆ:

ಮೇಲೆ ಕ್ರ.ಸಂ. (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 5ನೇ ರಾಜ್ಯ ವೇತನ ಆಯೋಗವು ಶಿಫಾರಸ್ಸು ಮಾಡಿರುವಂತೆ ರಾಜ್ಯ ಸರ್ಕಾರಿ ನೌಕರರುಗಳಿಗೆ ಮಂಜೂರು ಮಾಡಬಹುದಾದ ವಿವಿಧ ಮುಂಗಡಗಳ ಮೊತ್ತವನ್ನು ನಿಗದಿಪಡಿಸಲಾಗಿತ್ತು. ಅಧಿಕಾರಿಗಳ ವೇತನ ಸಮಿತಿಯ (2011) ವೇತನ ಮತ್ತು ಭತ್ಯೆಗಳ ಶಿಫಾರಸ್ಸನ್ನು ಒಪ್ಪಿ ಮೇಲೆ ಕ್ರ.ಸಂ. (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯ ಸರ್ಕಾರಿ ನೌಕರರುಗಳಿಗೆ ದಿನಾಂಕ:01.04.2012 ರಿಂದ ಜಾರಿಗೆ ಬರುವಂತೆ ವೇತನವನ್ನು ಪರಿಷ್ಕರಿಸಿ ಆದೇಶಿಸಿದೆ. ಅಧಿಕಾರಿಗಳ ವೇತನ ಸಮಿತಿಯು ಸಲ್ಲಿಸಿರುವ ವರದಿಯಲ್ಲಿ ರಾಜ್ಯ ಸರ್ಕಾರಿ ನೌಕರರುಗಳಿಗೆ ಮಂಜೂರು ಮಾಡುತ್ತಿರುವ ವಿವಿಧ ಮುಂಗಡಗಳ ಮೊತ್ತವನ್ನು ಹೆಚ್ಚಿಸಲು ಶಿಫಾರಸ್ಸು ಮಾಡಿದೆ. ಮುಂಗಡಗಳ ಮೊತ್ತವನ್ನು ಹೆಚ್ಚಿಸುವ ಶಿಫಾರಸ್ಸನ್ನು ಒಪ್ಪಿ, ಮೇಲೆ ಕ್ರ.ಸಂ. (1)ರಲ್ಲಿ ಓದಲಾದ ಆದೇಶದಲ್ಲಿ ನಿಗದಿಪಡಿಸಿರುವ ಮುಂಗಡಗಳ ಮಿತಿಯನ್ನು ಪರಿಷ್ಕರಿಸಲು ಸರ್ಕಾರ ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಆಇ 6 ಮಕಮು 2012, ಬೆಂಗಳೂರು, ದಿನಾಂಕ:18ನೇ ಜೂನ್, 2012

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನಲೆಯಲ್ಲಿ ರಾಜ್ಯ ಸರ್ಕಾರಿ ನೌಕರರುಗಳಿಗೆ ಈ ಕೆಳಕಂಡಂತೆ ಮುಂಗಡವನ್ನು ಮಂಜೂರು ಮಾಡಲು ಆದೇಶಿಸಿದೆ.

1. ವಾಹನಗಳ ಖರೀದಿ ಮುಂಗಡ

ಮೋಟಾರು ಕಾರು ಖರೀದಿ ಮುಂಗಡ

1.1 ಮಾಸಿಕವಾಗಿ ರೂ.38,100/- ಅಥವಾ ಅದಕ್ಕೂ ಹೆಚ್ಚಿನ ಮೂಲ ವೇತನವನ್ನು ಪಡೆಯುತ್ತಿರುವ ರಾಜ್ಯ ಉದ್ಯೋಗಿ ವೃಂದದಲ್ಲಿ ಖಾಯಂ ಆಗಿ ಸೇರ್ಪಡೆಯಾಗಿರುವ ಐಎಎಸ್., ಐಪಿಎಸ್., ಐಎಫ್‌ಎಸ್ ದರ್ಜೆಯ ಅಖಿಲ ಭಾರತ ಸೇವೆಗಳಿಗೆ ಸೇರಿದ ಅಧಿಕಾರಿಗಳೂ ಸೇರಿದಂತೆ, ಒಬ್ಬ ಸರ್ಕಾರಿ ನೌಕರನಿಗೆ ಮೋಟಾರು ಕಾರನ್ನು ಖರೀದಿಸಲು ಈ ಮುಂದಿನಂತೆ ಮುಂಗಡವನ್ನು ಮಂಜೂರು ಮಾಡಬಹುದು.

ಅ) ಮೊದಲನೆ ಬಾರಿ	ರೂ.3,00,000/- ಅಥವಾ 16 ತಿಂಗಳುಗಳ ಮೂಲ ವೇತನ ಅಥವಾ ಖರೀದಿಸಬೇಕಾದ ವಾಹನದ ಬೆಲೆ ಇವುಗಳಲ್ಲಿ ಯಾವುದು ಕಡಿಮೆಯೋ ಅದಕ್ಕೆ ಸೀಮಿತಗೊಳಿಸಿ.
ಆ) ಎರಡನೆಯ ಅಥವಾ ತರುವಾಯ ಸಂದರ್ಭದಲ್ಲಿ	ರೂ.3,00,000/- ಅಥವಾ ಸರ್ಕಾರಿ ಸಾಲದಿಂದ ಖರೀದಿಸಲಾದ ಹಿಂದಿನ ವಾಹನ ಮಾರಾಟದಿಂದ ಗಳಿಸಿದ ಲಾಭವನ್ನು ಕಳೆದು ಉಳಿತಾಯ ಮೊತ್ತ (ಅಂದರೆ ಹಳೆಯ ಕಾರು ಖರೀದಿಸಿದ್ದ ಬೆಲೆಗಿಂತ ಈಗಿನ ಮಾರಾಟದಿಂದ ಬಂದ ಹೆಚ್ಚಿನ ಹಣ) ಅಥವಾ 16 ತಿಂಗಳುಗಳ ಮೂಲ ವೇತನ ಅಥವಾ ಖರೀದಿಸಬೇಕಾದ ವಾಹನದ ಬೆಲೆ ಇವುಗಳಲ್ಲಿ ಯಾವುದು ಕಡಿಮೆಯೋ ಅದಕ್ಕೆ ಸೀಮಿತವಾಗಿ.

ಮೋಟಾರು ಸೈಕಲ್/ಸ್ಕೂಟರ್ ಖರೀದಿ ಮುಂಗಡ

1.2 ಮಾಸಿಕ ರೂ.19,500/– ಅಥವಾ ಅದಕ್ಕೂ ಹೆಚ್ಚಿನ ಮೂಲ ವೇತನ ಪಡೆಯುತ್ತಿರುವ ರಾಜ್ಯ ಉದ್ಯೋಗಿ ವೃಂದದಲ್ಲಿ ಖಾಯಂ ಆಗಿ ಸೇರ್ಪಡೆಯಾಗಿರುವ ಐಎಎಸ್., ಐಪಿಎಸ್, ಐಎಫ್ಎಸ್ ದರ್ಜೆಯ ಅಖಿಲ ಭಾರತ ಸೇವೆಗಳಿಗೆ ಸೇರಿದ ಅಧಿಕಾರಿಗಳೂ ಸೇರಿದಂತೆ, ಒಬ್ಬ ಸರ್ಕಾರಿ ನೌಕರನಿಗೆ ಮೋಟಾರು ಸೈಕಲ್/ಸ್ಕೂಟರ್ ಖರೀದಿಸಲು ಈ ಮುಂದಿನಂತೆ ಮುಂಗಡವನ್ನು ಮಂಜೂರು ಮಾಡಬಹುದು.

> ಮೊದಲನೇ ಬಾರಿ ಅಥವಾ ತರುವಾಯದ ಸಂದರ್ಭದಲ್ಲಿ ಹೊಸ ಅಥವಾ ಉಪಯೋಗಿಸಿರುವ ವಾಹನವನ್ನು ಖರೀದಿಸಲು ಗರಿಷ್ಠ ಮಿತಿ ರೂ.50,000/– ಅಥವಾ 8 ತಿಂಗಳ ಮೂಲ ವೇತನ ಅಥವಾ ವಾಹನದ ಬೆಲೆ ಇವುಗಳಲ್ಲಿ ಯಾವುದು ಕಡಿಮೆಯೋ ಅದಕ್ಕೆ ಸೀಮಿತಗೊಳಿಸಿ ಮಂಜೂರು ಮಾಡಬಹುದು.

ಬೈಸಿಕಲ್ ಖರೀದಿ ಮುಂಗಡ

1.3 ಮೊದಲನೇ ಬಾರಿ ಅಥವಾ ತರುವಾಯದ ಸಂದರ್ಭದಲ್ಲಿ ಮಾಸಿಕ ರೂ.16,400/–ರವರೆಗೆ ಮೂಲ ವೇತನ ಪಡೆಯುತ್ತಿರುವ ಸರ್ಕಾರಿ ನೌಕರನಿಗೆ, ಬೈಸಿಕಲ್ ಖರೀದಿಸಲು ಗರಿಷ್ಠ ರೂ.3,000/–ರವರೆಗೆ ಮುಂಗಡವನ್ನು ಮಂಜೂರು ಮಾಡಬಹುದು.

1.4. ಮೋಟಾರು ಕಾರು, ಮೋಟಾರು ಸೈಕಲ್, ಸ್ಕೂಟರ್, ಮತ್ತು ಬೈಸಿಕಲ್ ಖರೀದಿಯ ಮುಂಗಡ ಮಂಜೂರಾತಿಯನ್ನು ಕ್ರಮಬದ್ಧಗೊಳಿಸುವುದಕ್ಕೆ ಸಂಬಂಧಿಸಿದಂತೆ ಹಾಲಿ ಇರುವ ಷರತ್ತುಗಳೊಂದಿಗೆ ದಿನಾಂಕ: 21.10.1994ರ ಸರ್ಕಾರಿ ಆದೇಶ ಸಂಖ್ಯೆ:ಆಇ 48 ಮಕಮು 94ರ ಆದೇಶದಲ್ಲಿ ವಿಧಿಸಿರುವ ಇತರೆ ಷರತ್ತುಗಳು ಮುಂದುವರೆದು ಅನ್ವಯಿಸುತ್ತದೆ.

2. ಗಣಕ ಯಂತ್ರ ಮುಂಗಡ

2.1 ಮೊದಲನೇ ಬಾರಿ ಅಥವಾ ತರುವಾಯದ ಸಂದರ್ಭಗಳಲ್ಲಿ ಮಾಸಿಕ ರೂ.22,200/– ಅಥವಾ ಅದಕ್ಕೂ ಹೆಚ್ಚಿನ ಮೂಲ ವೇತನವನ್ನು ಪಡೆಯುತ್ತಿರುವ ರಾಜ್ಯ ಉದ್ಯೋಗಿ ವೃಂದದಲ್ಲಿ ಖಾಯಂ ಆಗಿ ಸೇರ್ಪಡೆಯಾಗಿರುವ ಐಎಎಸ್., ಐಪಿಎಸ್, ಐಎಫ್ಎಸ್ ದರ್ಜೆಯ ಅಖಿಲ ಭಾರತ ಸೇವೆಗಳಿಗೆ ಸೇರಿದ ಅಧಿಕಾರಿಗಳೂ ಸೇರಿದಂತೆ, ಒಬ್ಬ ಸರ್ಕಾರಿ ನೌಕರನಿಗೆ ಸ್ವಂತ ಗಣಕ ಯಂತ್ರದ ಬೆಲೆ ಅಥವಾ ರೂ.40,000/– ಇವೆರಡರಲ್ಲಿ ಯಾವುದು ಕಡಿಮೆಯೋ ಅದಕ್ಕೆ ಸೀಮಿತಗೊಳಿಸಿ ಮಂಜೂರು ಮಾಡಬಹುದು. ಸರ್ಕಾರಿ ನೌಕರ ಗಣಕ ಯಂತ್ರ ಖರೀದಿಸಿದ ನಂತರ ಈ ಆದೇಶದೊಂದಿಗೆ ಲಗತ್ತಿಸಲಾದ ಅನುಬಂಧದಂತೆ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

2.2 ಗಣಕಯಂತ್ರ ಖರೀದಿ ಮುಂಗಡ ಮಂಜೂರಾತಿಯನ್ನು ಕ್ರಮಬದ್ಧಗೊಳಿಸುವುದಕ್ಕೆ ಸಂಬಂಧಿಸಿದಂತೆ ಹಾಲಿ ಇರುವ ಷರತ್ತುಗಳೊಂದಿಗೆ ದಿನಾಂಕ:21.10.94ರ ಸರ್ಕಾರಿ ಆದೇಶ ಸಂಖ್ಯೆ:ಆಇ 48 ಮಕಮು 94ರಲ್ಲಿ ವಿಧಿಸಿರುವ ಇತರೆ ಷರತ್ತುಗಳು ಮುಂದುವರೆದು ಅನ್ವಯಿಸುತ್ತದೆ.

3. ಸಾಧನ ಸಾಮಗ್ರಿ ಮುಂಗಡ

3.1 ನವದೆಹಲಿ ಅಥವಾ ರಾಜ್ಯದ ಹೊರಗಿನ ಸ್ಥಳಗಳಿಗೆ ಕೆಲಸಕ್ಕಾಗಿ ನಿಯೋಜಿಸಲ್ಪಟ್ಟ ಅಖಿಲ ಭಾರತ ಸೇವೆಯ ಅಧಿಕಾರಿಗಳೂ ಸೇರಿದಂತೆ, ಒಬ್ಬ ಸರ್ಕಾರಿ ನೌಕರನಿಗೆ ಬಡ್ಡಿ ರಹಿತ ರೂ.12,000/– ಗರಿಷ್ಠತೆಗೊಳಪಟ್ಟು ಮೂರು ತಿಂಗಳ ಮೂಲ ವೇತನ ಇದರಲ್ಲಿ ಯಾವುದು ಕಡಿಮೆಯೋ ಅದನ್ನು ಮಂಜೂರು ಮಾಡಬಹುದು.

3.2 ಈ ಮಂಜೂರಾತಿಯನ್ನು ಕ್ರಮಬದ್ಧಗೊಳಿಸುವುದಕ್ಕೆ ಸಂಬಂಧಿಸಿದಂತೆ ಹಾಲಿ ಇರುವ ಷರತ್ತುಗಳೊಂದಿಗೆ ದಿನಾಂಕ:21.10.94ರ ಸರ್ಕಾರಿ ಆದೇಶ ಸಂಖ್ಯೆ:ಆಇ 48 ಮಕಮು 94ರಲ್ಲಿ ವಿಧಿಸಿದ ಇತರೆ ಷರತ್ತುಗಳು ಮುಂದುವರೆದು ಅನ್ವಯಿಸುತ್ತದೆ.

4. ಹಬ್ಬದ ಮುಂಗಡ

4.1 ರಾಜ್ಯ ಉದ್ಯೋಗಿ ವೃಂದದಲ್ಲಿ ಖಾಯಂ ಆಗಿ ಸೇರ್ಪಡೆಯಾಗಿರುವ ಅಖಿಲ ಭಾರತ ಸೇವೆ ಅಧಿಕಾರಿಗಳು ಸೇರಿದಂತೆ ಒಬ್ಬ ಖಾಯಂ ಸರ್ಕಾರಿ ನೌಕರನಿಗೆ ಒಂದು ಆರ್ಥಿಕ ವರ್ಷದಲ್ಲಿ ಒಂದು ಬಾರಿಗೆ ರೂ.5,000/– ಬಡ್ಡಿ ರಹಿತ ಹಬ್ಬದ ಮುಂಗಡವನ್ನು ಮಂಜೂರು ಮಾಡಬಹುದು.

4.2 ದಿನಾಂಕ:21.10.94ರ ಸರ್ಕಾರಿ ಆದೇಶ ಸಂಖ್ಯೆ:ಆಇ 48 ಮಕಮು 94ರಲ್ಲಿ ಹಬ್ಬದ ಮುಂಗಡವನ್ನು ಮಂಜೂರು ಮಾಡಲು ಅನುಸರಿಸಲಾಗುತ್ತಿರುವ ಷರತ್ತುಗಳು ಮುಂದುವರೆದು ಅನ್ವಯಿಸುತ್ತದೆ.

5. ಸೋಲಾರ್ ವಾಟರ್ ಹೀಟರ್ ಮುಂಗಡ

5.1 ಸೋಲಾರ್ ವಾಟರ್ ಹೀಟರ್ ಖರೀದಿ ಮುಂಗಡವನ್ನು ರೂ.25,000/–ಅಥವಾ ಅದರ ವಾಸ್ತವಿಕ ಬೆಲೆ ಇದರಲ್ಲಿ ಯಾವುದು ಕಡಿಮೆಯೋ ಅದಕ್ಕೆ ಸೀಮಿತಗೊಳಿಸಿ ಮಂಜೂರು ಮಾಡಬಹುದು ಮತ್ತು ದಿನಾಂಕ:21.10.1994ರ ಸರ್ಕಾರಿ ಆದೇಶ ಸಂಖ್ಯೆ:ಆಇ 48 ಮಕಮು 94ರಲ್ಲಿ ವಿಧಿಸಿರುವ ಷರತ್ತುಗಳು ಮುಂದುವರೆದು ಅನ್ವಯಿಸುತ್ತದೆ.

6. ಸೋಲಾರ್ ಕುಕ್ಕರ್ ಮುಂಗಡ

6.1 ಸೋಲಾರ್ ಕುಕ್ಕರ್ ಖರೀದಿ ಮುಂಗಡವನ್ನು ರೂ.1,500/– ಅಥವಾ ಅದರ ವಾಸ್ತವಿಕ ಬೆಲೆ ಇದರಲ್ಲಿ ಯಾವುದು ಕಡಿಮೆಯೋ ಅದಕ್ಕೆ ಸೀಮಿತಗೊಳಿಸಿ ಮಂಜೂರು ಮಾಡಬಹುದು ಮತ್ತು ದಿನಾಂಕ:21.10.1994ರ ಸರ್ಕಾರಿ ಆದೇಶ ಸಂಖ್ಯೆ:ಆಇ 48 ಮಕಮು 94ರಲ್ಲಿ ವಿಧಿಸಿರುವ ಷರತ್ತುಗಳು ಮುಂದುವರೆದು ಅನ್ವಯಿಸುತ್ತದೆ.

ಈ ಆದೇಶ ದಿನಾಂಕ 1ನೇ ಏಪ್ರಿಲ್ 2012 ರಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ಎಲ್. ರಮೇಶ

ಸರ್ಕಾರದ ಅಧೀನ ಕಾರ್ಯದರ್ಶಿ

ಆರ್ಥಿಕ ಇಲಾಖೆ (ಆಡಳಿತ & ಮುಂಗಡಗಳು)

ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ:ಆಇ 6 ಮಕಮು 2012, ಬೆಂಗಳೂರು, ದಿನಾಂಕ:18ನೇ ಜೂನ್, 2012

ಪ್ರಮಾಣ ಪತ್ರ

____________________ ಇಲಾಖೆಯಲ್ಲಿ ____________________ ಆಗಿ ಸೇವೆ ಸಲ್ಲಿಸುತ್ತಿರುವ ______________ ಆದ ನಾನು ಗಣಕ ಯಂತ್ರ ಮುಂಗಡ ಸೌಲಭ್ಯ ಉಪಯೋಗಿಸಿಕೊಂಡು ಸರ್ಕಾರಿ ಆದೇಶ ಸಂಖ್ಯೆ: ______________, ದಿನಾಂಕ: ______________ ರಲ್ಲಿ ಮಂಜೂರಾಗಿರುವಂತೆ ರೂ.____________ ವೆಚ್ಚದಲ್ಲಿ ಗಣಕ ಯಂತ್ರವನ್ನು ಖರೀದಿಸಿರುತ್ತೇನೆ.

ಖರೀದಿಸಿದ ಗಣಕ ಯಂತ್ರದ ವಿವರಗಳು ಕೆಳಗಿನಂತಿವೆ:–

1) ಉತ್ಪಾದಕರ ಹೆಸರು :

2) ಮಾಡಲ್ :

3) ಕನ್‌ಫಿಗರೇಶನ್ :

4) ಖರೀದಿಸಿದ ದಿನಾಂಕ :

ಪಿ.ಆರ್. 1872 **ಸರ್ಕಾರಿ ನೌಕರನ ಸಹಿ**

ಆರ್ಥಿಕ ಸಚಿವಾಲಯ

ವಿಷಯ: ಶ್ರೀ ರುದ್ರಗೌಡ ಬಸನಗೌಡ ಪಾಟೀಲ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರನ್ನು ಸೇವೆಗೆ ಪುನರ್ ಸ್ಥಾಪಿಸುವ ಬಗ್ಗೆ.

ಓದಲಾಗಿದೆ: 1) ಶ್ರೀ ಆರ್.ಬಿ.ಪಾಟೀಲ್, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರ ಮನವಿ ದಿನಾಂಕ: 22–02–2012.

2) ವಾಣಿಜ್ಯ ತೆರಿಗೆ ಆಯುಕ್ತರ ಪತ್ರ ಸಂಖ್ಯೆ: ಡಿಎ/ಜಿಎಜಡ್/ ಸಿಆರ್–09/ 2010–2011 ದಿನಾಂಕ:27–04–2012.

ಪ್ರಸ್ತಾವನೆ:

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ: (1) ರಲ್ಲಿ ಶ್ರೀ ರುದ್ರಗೌಡ ಬಸನಗೌಡ ಪಾಟೀಲ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ, ಸೇವೆಗೆ ಪುನರ್ ಸ್ಥಾಪಿಸುವಂತೆ ಹಾಗೂ ನ್ಯಾಯಾಂಗ ಬಂಧನದ ಅವಧಿಯನ್ನು ಸೇವಾನಿರತ ಅವಧಿ ಎಂದು ಪರಿಗಣಿಸುವಂತೆ ಮನವಿಯನ್ನು ಸಲ್ಲಿಸಿದ್ದರು.

ಮೇಲೆ ಓದಲಾದ ಕ್ರಮ ಸಂಖ್ಯೆ:(2) ರಲ್ಲಿ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಸದರಿ ಅಧಿಕಾರಿಯವರು ಕೊಲೆ ಅಪರಾಧಕ್ಕೆ ಸಂಬಂಧಿಸಿದಂತೆ, ಹುಕ್ಕೇರಿ ಪೊಲೀಸ್ ಠಾಣೆಯಲ್ಲಿ ಆರೋಪಿಯನ್ನಾಗಿ ಮಾಡಿ ದಿನಾಂಕ: 24–12–2008 ರಿಂದ 24–03–2009 ರವರೆಗೆ ನ್ಯಾಯಾಂಗ ಬಂಧನದಲ್ಲಿರಿಸಲಾಗಿದ್ದು, ಈ ಪ್ರಕರಣವನ್ನು ನಡೆಸಿದ ಹುಕ್ಕೇರಿ ನ್ಯಾಯಾಲಯವು ತಪ್ಪಿತಸ್ಥರೆಂದು ಪರಿಗಣಿಸಿ, ದಿನಾಂಕ:03–08–2010 ರಿಂದ ನ್ಯಾಯಾಂಗ ಬಂಧನದಲ್ಲಿರಿಸಿದ್ದು, ಈ ನ್ಯಾಯಾಲಯದ ತೀರ್ಪಿನ ವಿರುದ್ಧ ಕ್ರಿಮಿನಲ್ ಮೇಲ್ಮನವಿ ಸಂಖ್ಯೆ: 2750/2010ನ್ನು ಪುರಸ್ಕರಿಸಿದ ಮಾನ್ಯ ಉಚ್ಚ ನ್ಯಾಯಾಲಯ, ಸಂಚಾರಿ ಪೀಠ, ಧಾರವಾಡ, ಇವರು ಅಧಿಕಾರಿಯನ್ನು ಸರ್ಕಾರಿ ಅಭಿಯೋಗವು ಆಪಾದನೆಯನ್ನು ರುಜುವಾತುಪಡಿಸಲು ವಿಫಲರಾದ ಹಿನ್ನೆಲೆಯಲ್ಲಿ ಸಂಶಯಾತ್ಮಕ ಲಾಭವನ್ನು ಆಪಾದಿತ ಅಧಿಕಾರಿಯವಿರಗೆ ನೀಡಿ, ಅವರನ್ನು ನಿರಪರಾಧಿ ಎಂದು ಪರಿಗಣಿಸಿ ದಿ:24–01–2011 ರಂದು ಅಂತಿಮ ತೀರ್ಪು ನೀಡಿದ್ದರಿಂದ ದಿನಾಂಕ: 30–01–2011 ರಲ್ಲಿ ನ್ಯಾಯಾಂಗ ಬಂಧನದಿಂದ ಬಿಡುಗಡೆಹೊಂದಿರುತ್ತಾರೆಂದು ತಿಳಿಸಲಾಗಿದೆ.

ಶ್ರೀ ವಿ.ಆರ್.ಸಾಲಿ, ಇವರನ್ನು ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರಾಗಿ (ಲೆಕ್ಕಪರಿಶೋಧನೆ), ಧಾರವಾಡ (Deemed suspension) ನಲ್ಲಿರುವ ಶ್ರೀ ರುದ್ರಗೌಡ ಬಸನಗೌಡ ಪಾಟೀಲ, ಜಾಗಕ್ಕೆ ನೇಮಿಸಿರುವುದರಿಂದ ಶ್ರೀ ರುದ್ರಗೌಡ ಬಸನಗೌಡ ಪಾಟೀಲ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರ ಲೀನ್‌ನ್ನು ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಕೇಂದ್ರ ಕಛೇರಿ), ಬೆಳಗಾಂ ಇಲ್ಲಿಗೆ ವರ್ಗಾಯಿಸಿ, ತದನಂತರ ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಇವರ ಪ್ರಸ್ತಾವನೆ ಮೇರೆಗೆ 15–11–2011ರ ಅಧಿಸೂಚನೆಯಲ್ಲಿ ಇವರ ಲೀನ್‌ನ್ನು ಖಾಲಿ ಇರುವ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಲೆಕ್ಕಪರಿಶೋಧನೆ ಮತ್ತು ವಸೂಲಿ), ಜಮಖಂಡಿ, ಹುದ್ದೆಗೆ ವರ್ಗಾಯಿಸಿ ಆದೇಶಿಸಲಾಗಿದೆ.

ಶ್ರೀ ರುದ್ರಗೌಡ ಬಸನಗೌಡ ಪಾಟೀಲ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರು ನ್ಯಾಯಾಂಗ ಬಂಧನದಲ್ಲಿದ್ದ ಅವಧಿ ದಿನಾಂಕ: 24–12–2008 ರಿಂದ 23–03–2009 ಹಾಗೂ ದಿನಾಂಕ: 03–08–2010 ರಿಂದ 30–01–2011 ರವರೆಗಿನ ನ್ಯಾಯಾಂಗ ಬಂಧನದ ಅವಧಿಯನ್ನು Deemed suspension ಎಂದು ಪರಿಗಣಿಸಲಾಗಿರುವುದಾಗಿ ತಿಳಿಸಿ, ಕೊಲೆ ಆಪಾದನೆ ಮೇಲೆ ಕಾರಾಗೃಹದಲ್ಲಿದ್ದ ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸಲು ಸಾಧ್ಯವಿರುವುದಿಲ್ಲವಾದ್ದರಿಂದ ಕರ್ನಾಟಕ ನಾಗರೀಕ ಸೇವಾ ನಿಯಮ 100(7) ರಂತೆ ಸದರಿ ಅವಧಿಯನ್ನು ಅವರ ಹಕ್ಕಿನಲ್ಲಿರುವ ಗಳಿಕೆ ರಜೆ ಎಂದು ಪರಿಗಣಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ರುದ್ರಗೌಡ ಬಸನಗೌಡ ಪಾಟೀಲ, ಇವರನ್ನು ಅಮಾನತ್ತುಗೊಳಿಸಲಾಗಿರುವುದಿಲ್ಲ. ಕಾನೂನು ಇಲಾಖೆಯ ಅಭಿಪ್ರಾಯದಂತೆ ದಿನಾಂಕ: 24–12–2008 ರಿಂದ 23–03–2009 ರವರೆಗೆ ಹಾಗೂ ದಿನಾಂಕ: 03–08–2010 ರಿಂದ 30–01–2011 ರವರೆಗೆ ನ್ಯಾಯಾಂಗ ಬಂಧನದ ಅವಧಿಯನ್ನು Deemed suspension ಎಂದು ಪರಿಗಣಿಸಲು ಹಾಗೂ ಈ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮ 100(7) ರಂತೆ ಅವರ ಹಕ್ಕಿನಲ್ಲಿರುವ ಗಳಿಕೆ ರಜೆ ಅಥವಾ ಪರಿವರ್ತಿತ ರಜೆಯಲ್ಲಿ ಪರಿಗಣಿಸಲು ಪರಿಶೀಲಿಸುತ್ತಿರುವುದರಿಂದ ಇವರನ್ನು ಸೇವೆಗೆ ಪುನರ್ ನೇಮಿಸಲು ಸರ್ಕಾರವು ತೀರ್ಮಾನಿಸಿ ಈ ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಇ 51 ವಾತೆತ 2010 ಬೆಂಗಳೂರು, ದಿನಾಂಕ: 25–06–2012

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಶಿಸ್ತುಪ್ರಾಧಿಕಾರವಾದ ಸರ್ಕಾರವು, ಶ್ರೀ ರುದ್ರಗೌಡ ಬಸನಗೌಡ ಪಾಟೀಲ, ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಇವರನ್ನು ಸೇವೆಗೆ ಪುನರ್ ಸ್ಥಾಪಿಸಿ, ಖಾಲಿ ಇರುವ ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, (ಲೆಕ್ಕಪರಿಶೋಧನೆ)–5, ಮಂಗಳೂರು, ಈ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ನೇಮಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಆರ್.ಚಂದ್ರಶೇಖರಾರಾಧ್ಯ

ಪೀಠಾಧಿಕಾರಿ,

ಪಿ.ಆರ್. 1881 ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ–2).

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ, ಚಿತ್ತಾಪೂರ ತಾಲ್ಲೂಕಿನ ಬನ್ನಟ್ಟಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಬಿಡುಗಡೆ ಮಾಡುವ ಕುರಿತು

ಓದಲಾಗಿದೆ: ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ಪತ್ರದ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2011–12/4037, ದಿನಾಂಕ: 30–07–2011

ಪ್ರಸ್ತಾವನೆ:

ಗುಲ್ಬರ್ಗಾ ಜಿಲ್ಲೆ, ಚಿತ್ತಾಪೂರ ತಾಲ್ಲೂಕಿನ ಬನ್ನಟ್ಟಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬನ್ನಟ್ಟಿ ಗ್ರಾಮದ ಜಮೀನುಗಳಿಗೆ ಪರಿಹಾರ ಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರು ಮೇಲೆ ಓದಲಾದ ದಿನಾಂಕ 30–07–2011ರ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿದ್ದಾರೆ. ಭೂಸ್ವಾಧೀನ ಪ್ರಕ್ರಿಯೆ ವಿವರಗಳು ಕೆಳಕಂಡಂತಿದೆ:

- ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆ ಹೊರಡಿಸಿದ ದಿನಾಂಕ 12–09–96
- ಭೂಸ್ವಾಧೀನಾಧಿಕಾರಿಗಳು ಐತೀರ್ಪು ಘೋಷಿಸಿದ ದಿನಾಂಕ 12–05–99

ಭೂಸ್ವಾಧೀನಾಧಿಕಾರಿಗಳ ಐತೀರ್ಪಿನಂತೆ ಪರಿಹಾರ ಪಡೆದ ಭೂಮಾಲೀಕರು ಇನ್ನೂ ಹೆಚ್ಚಿನ ಪರಿಹಾರ ಕೋರಿ ಸೇಡಂ ಸಿವಿಲ್ ಜಡ್ಜ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಎಲ್.ಎ.ಸಿ. ಪ್ರಕರಣ ಸಂಖ್ಯೆ : 58/04ನ್ನು ದಾಖಲಿಸಿದ್ದು, ನ್ಯಾಯಾಲಯವು ದಿನಾಂಕ: 25–02–08ರಂದು ನೀಡಿರುವ ಆದೇಶದಲ್ಲಿ ಪ್ರತಿ ಎಕರೆ ಜಮೀನಿಗೆ ರೂ.43,000/–ಗಳನ್ನು ಇತರೆ ಸವಲತ್ತುಗಳೊಂದಿಗೆ ಪಾವತಿಸುವಂತೆ ಆದೇಶಿಸಿದೆ. ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯ ಕಾನೂನು ಕೋಶದ ಮುಖ್ಯಸ್ಥರು ಅಭಿಪ್ರಾಯ ಪಟ್ಟಿರುತ್ತಾರೆ. ಪಾವತಿಸಬೇಕಾದ ಪರಿಹಾರ ಮೊತ್ತದ ವಿವರ ಕೆಳಕಂಡಂತಿದೆ:

ಕ್ರಸಂ	ಎಲ್‌ಎಸಿ ಸಂಖ್ಯೆ	ಬನ್ನಟ್ಟಿ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ	ಪರಿಹಾರ ಮೊತ್ತ ರೂ.ಗಳಲ್ಲಿ
1	**58/04**	**41/27**	**2–28**	**3,93,398–00**

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ :ಸನೀಇ 101 ಭೂಸ್ವಾಪ್ರ 2011, ಬೆಂಗಳೂರು, ದಿನಾಂಕ 23ನೇ ಜೂನ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಬನ್ನಟ್ಟಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಬನ್ನಟ್ಟಿ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ ಪ್ರಕರಣ ಸಂಖ್ಯೆ :58/04ರಲ್ಲಿ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚುವರಿ ಪರಿಹಾರ ಧನ ರೂ.3,93,398–00ಗಳನ್ನು (ಮೂರು ಲಕ್ಷದ ತೊಂಬತ್ತ್ಮೂರು ಸಾವಿರದ ಮುನ್ನೂರ ತೊಂಬತ್ತೆಂಟು ರೂ.ಗಳೂ ಮಾತ್ರ) ಪಾವತಿಸಲು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಿದೆ.

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2012–13ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "4702–00–800–1–00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಮುಗಳ ಇತ್ಯರ್ಥ–132 ಬಂಡವಾಳ ವೆಚ್ಚಗಳು" ಅಡಿ ಒದಗಿಸಿರುವ ಅನುದಾನದಿಂದ ರೂ.3,93,398/–ಗಳನ್ನು ಹಂಚಿಕೆ ಮಾಡಿ ಬಿಡುಗಡೆ ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010, ದಿನಾಂಕ 20–10–10ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ,

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 1744 ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ).

ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವಾಲಯ

ವಿಷಯ : ಶ್ರೀ ರಾಮಚಂದ್ರಗೌಡ, ಮಾನ್ಯ ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿ, ಇವರ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ : ಪಿಡಿ 48 ಎಸ್‌ಪಿಬಿ 2010, ಬೆಂಗಳೂರು, ದಿನಾಂಕ: 22–09–2010.

2. ಮಾನ್ಯ ಮುಖ್ಯಮಂತ್ರಿಯವರ ಅಪರ ಕಾರ್ಯದರ್ಶಿ ಹಾಗೂ ಪದನಿಮಿತ್ತ ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳ ಟಿಪ್ಪಣಿ ಸಂಖ್ಯೆ : ಮುಮಂಅಕಾ/3746/2012–13, ದಿನಾಂಕ: 15–05–2012.

ಪ್ರಸ್ತಾವನೆ:

ವಿಧಾನ ಪರಿಷತ್ ಸದಸ್ಯರಾದ ಶ್ರೀ ರಾಮಚಂದ್ರಗೌಡರವರನ್ನು ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರನ್ನಾಗಿ ನೇಮಕಾತಿ ಮಾಡಿ ಉಲ್ಲೇಖ (1)ರ ದಿನಾಂಕ: 22–09–2010ರ ಆದೇಶದಲ್ಲಿ ಸರ್ಕಾರದ ಆದೇಶವನ್ನು ಹೊರಡಿಸಲಾಗಿರುತ್ತದೆ.

ಕ್ರಮ ಸಂಖ್ಯೆ (2)ರ ಟಿಪ್ಪಣಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರ ಕಾರ್ಯಾಲಯದ ದಿನಾಂಕ: 15–05–2012ರ ಟಿಪ್ಪಣಿಯಲ್ಲಿ ಉಪಾಧ್ಯಕರಾದ ಶ್ರೀ ರಾಮಚಂದ್ರಗೌಡರವರ ರಾಜೀನಾಮೆ ಪತ್ರ ಪಡೆದು ರಾಜೀನಾಮೆಯನ್ನು ಅಂಗೀಕರಿಸಲಾಗಿರುವ ಬಗ್ಗೆ ತಿಳಿಸಿ, ಸೂಕ್ತ ಆದೇಶ ಹೊರಡಿಸುವಂತೆ ಆದೇಶಿಸಲಾಗಿರುತ್ತದೆ.

ಅದರಂತೆ ಈ ಆದೇಶ

ಸರ್ಕಾರದ ಆದೇಶ ಸಂಖ್ಯೆ : ಪಿಡಿ 48 ಎಸ್‌ಪಿಬಿ 2010, ಬೆಂಗಳೂರು, ದಿನಾಂಕ 15ನೇ ಮೇ 2012.

ರಾಜ್ಯ ಯೋಜನಾ ಮಂಡಳಿಯ ಉಪಾಧ್ಯಕ್ಷರಾದ ಶ್ರೀ ರಾಮಚಂದ್ರಗೌಡರವರ ರಾಜೀನಾಮೆಯನ್ನು ದಿನಾಂಕ: 15–05–2012ರ ಅಪರಾಹ್ನದಿಂದ ಜಾರಿಗೆ ಬರುವಂತೆ ಅಂಗೀಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಉಷಾಬಾಯಿ,

ಸರ್ಕಾರದ ಅಧೀನ ಕಾರ್ಯದರ್ಶಿ ಎಸ್–3

ಪಿ.ಆರ್. 1422 ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ಸೇರ್ಪಡೆ

ಸಂಖ್ಯೆ : ಮೂಅಇ 54 ಮೂಇವಿ 2012 (ಭಾಗ), ಬೆಂಗಳೂರು, ದಿನಾಂಕ 08ನೇ ಮೇ 2012.

ಸರ್ಕಾರದ ಆದೇಶ ಸಂಖ್ಯೆ ಮೂಅಇ 54 ಮೂಇವಿ 2012 ದಿನಾಂಕ 03–04–2012ರಲ್ಲಿ ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಯ 2012–13ನೇ ಸಾಲಿಗೆ ಮುಂದುವರೆದ ಯೋಜನೆಗಳಿಗೆ ಮಂಜೂರಾತಿ ನೀಡಲಾದ ಆದೇಶ ಭಾಗದಲ್ಲಿನ ಕ್ರಮಸಂಖ್ಯೆ 31ರ ನಂತರದ ಕ್ರಮಸಂಖ್ಯೆ 32 ನ್ನು ಈ ಕೆಳಕಂಡಂತೆ ಸೇರ್ಪಡೆ ಮಾಡಿದ್ದು ಅದರಂತೆ ಓದಿಕೊಳ್ಳತಕ್ಕದ್ದು.

(₹ in lakhs)

Sl. No.	Nomenclature of the Scheme	Budget provision during 2011-12	Budget provision during 2012-13
32	3451-00-090-1-17 Capacity Building – P.P.P Other Expenses ಸಾಮರ್ಥ್ಯ ನಿರ್ಮಾಣ – ಪಿ.ಪಿ.ಪಿ ಇತರ ಖರ್ಚುಗಳು	500.00	500.00

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಆರ್.ಶಿವಲಿಂಗಯ್ಯ,

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1352 ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ.

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ಸೇರ್ಪಡೆ

ಸಂಖ್ಯೆ : ಅಪಜೀ 38 ಎಫ್‌ಪಿಸಿ 2012, ಬೆಂಗಳೂರು, ದಿನಾಂಕ 21–07–2012

ಸರ್ಕಾರದ ಆದೇಶ ಸಂಖ್ಯೆ : ಅಪಜೀ 38 ಎಫ್‌ಪಿಸಿ 2012, ದಿನಾಂಕ 12–06–2012ರ ಆದೇಶದ ಭಾಗದಲ್ಲಿನ ಕ್ರಮ ಸಂಖ್ಯೆ : 10ರ ನಂತರ ಕೆಳಗಿನಂತೆ ಸೇರ್ಪಡೆ ಮಾಡಲಾಗಿದೆ:–

10(ಅ) ಮುಖ್ಯ ಕಾರ್ಯನಿರ್ವಹಣಾಧಿಕಾರಿ – ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ಗಿಡಮೂಲಿಕಾ ಔಷಧಿ ಪ್ರಾಧಿಕಾರ, ಬೆಂಗಳೂರು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಉಮಾದೇವಿ,
ಸರ್ಕಾರದ ಉಪ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪಿ.ಆರ್. 1948

LABOUR SECRETARIAT

Sub : Co-opting of GIZ-IS representative as member in IMCs of PPP-ITIs in Karnataka.

Read : Letter No. GIZ-IS/PPP/ITI/TRG/2012/16, dated 18-05-2012 from Team Leader GIZ-IS-ITI upgradation Project-Karnataka, Bangalore.

PREAMBLE :

Team Leader, GIZ-IS-ITI upgradation Project-Karnataka in his letter read above has informed that GIZ-IS has been appointed as an expert agency for Technical support for the up-gradation of 76 PPP-ITIs in the State of Karnataka. In order to cater the needs and to individualize the support to all the PPP-ITIs which have been covered under the project, five teams of GIZ-IS experts have been placed at Bangalore, Mysore, Belgaum, Mangalore and Gulbarga attempting to support ITIs in their respective regions with a focus on all aspects of growth as planned in the ITI upgradation scheme.

As per the decision made in the meeting held on 3rd April, 2012 under the Chairmanship of the Chief Secretary, the Principals of the 76 PPP ITIs are requested to co-opt GIZ IS representative as member in the IMC Society. This is well within the provisions made in the MoA under section B-clause 3 and 4 (V).

This measure will provide the PPP ITSs the benefit of GIZ IS experience and expertise in managing all their developmental needs and enables their association with GIZ purposeful. The matter has been examined and hence the following order.

GOVERNMENT ORDER NO. LD 178 ETI 2012, BANGALORE, DATED 06-07-2012

Sanction is accorded to co-opt of GIZ-IS representative as member in IMCs of PPP-ITIs in Karnataka and list of GIZ-IS members nominated as invitee members in IMC's of the ITI's appended as Annexure-I.

By Order and in the name of the Governor of Karnataka,
J.S. VISHWANATHAPPA,
Desk Officer,
Labour Department. (Employment and Training)

ANNEXURE-I

List of GIZ-IS members nominated as invitee members in IMCs of ITI

Sl. No.	Name of PPP ITI	Name of PPP ITI	Name of PPP ITI	Name of PPP ITI	Name of PPP ITI
1	Women ITI Bangalore-29	Women ITI Belgaum	Women ITI Gulbarga	Channarayapatna	Women ITI Mangalore
2	Viveknagar-Bangalore	Mundargi	Lingsagur	Hunsur	Vittal

Sl. No.	Name of PPP ITI	Name of PPP ITI	Name of PPP ITI	Name of PPP ITI	Name of PPP ITI
3	Pavagada	Sudi	Hanumasagar	Gundlupet	Padavalahippe
4	Bharamsagara	Jamkhandi	Talakalgrama	H.D. Kote	Peradur
5	Channagiri	Naragund	Koppal	Chikamagaluru	Udupi
6	Challakere	Guttal	Hospet	Ponnampet	Belthangady
7	Tumkur	Ramdurg	Mudgal	Kadur	Arakalgud
8	Sira	Gokak	Wadi	Arsikere	Alursiddapura
9	Bagepalli	Guledagudda	Mangaloregrama	Kollegal	Mundagod
10	Ramanagara	Nippani	Humnabad	Mysore	Shikaripura
11	Kolar (Women ITI)	Soundatti	Vittalapur	Pandavapura	Palagrama
12	Devanahalli	Nesargi	Gangavathi	Periyapatna	Akkialur
13	Ammasandra	Bableshwar	Jewargi	K.R. Pet	Dandeli
14	Kalghatgi	Bilagi	Chincholi	Maddur	
15	Dharwad	Sadalga	Kudligi	K.M. Doddi	
16	Turuvekere	Women ITI Gadag		Tarikere	
Name of GIZ-IS Expert Nominated as coopted member in IMC	Mr. K.V. Ravikumar Technical Expert GIZ-IS Address : No. 17 (old No. 947) 23rd Main, 4th T Block, Jayanagar, Bangalore-560041 Ph. No. 9900475500 Email : kv.ravikumar@giz.de	Mr. Ravi Shankar Korgal Technical Expert GIZ-IS Address : # 2045, "Basava Chetan" Sector-9, Mala Maruti Extension Belgaum-590016 Ph : 9880499854 Email : ravishankar.korgal@giz.de	Mr. Annes Khan Technical Expert GIZ-IS Address : 1-867/22 G/A2, Mahaveer nagar, Gulbarga-585102 Ph : 9845295577 No. email. id:anees.khan@giz.de	Mr. Ram Chandra Rao Technical Expert GIZ-IS Address : No. 17, Maruti, 1st Main, Ramakrishna nagar, H-Block, Mysore-570023, INDIA Ph : 9986035618 Email : Ramachandra.rao@ciz.de	Mr. Srinivas Gopal Technical Expert GIZ-IS Ph : No. 9844727344 email Id : srinivasalatha@yahoo.com
	Nominated as coopted member in IMCs of above ITIs	Nominated as coopted member in IMCs of above ITIs	Nominated as coopted member in IMCs of above ITIs	Nominated as coopted member in IMCs of above ITIs	Nominated as coopted member in IMCs of above ITIs

P.R. 1846

ಆರ್ಥಿಕ ಸಚಿವಾಲಯ

ವಿಷಯ: ಸರ್ಕಾರದ ಇಲಾಖೆಗಳ ಇಲಾಖಾ ಮುಖ್ಯಸ್ಥರುಗಳು ಮತ್ತು ಇತರೆ ಅಧಿಕಾರಿಗಳ ಸಾಮಾನ್ಯ ವಿತ್ತಾಧಿಕಾರ ಪ್ರತ್ಯಾಯೋಜಿಸುವ ಪರಿಷ್ಕರಣೆ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ:ಆಇ 1:ಟಿಎಫ್‌ಪಿ 2001 ಬೆಂಗಳೂರು, ದಿನಾಂಕ:02–02–2001.

2. ಸರ್ಕಾರದ ಆದೇಶ ಸಂಖ್ಯೆ:ಆಇ 1:ಟಿಎಫ್‌ಪಿ 2009 ಬೆಂಗಳೂರು, ದಿನಾಂಕ:30–05–2009.
3. ಸರ್ಕಾರದ ಆದೇಶ ಸಂಖ್ಯೆ:ಆಇ 2:ಟಿಎಫ್‌ಪಿ 2010 ಬೆಂಗಳೂರು, ದಿನಾಂಕ:30–04–2010.
4. ಆಯುಷ್ ನಿರ್ದೇಶನಾಲಯದ ಮುಖ್ಯ ಆಡಳಿತಾಧಿಕಾರಿಯವರ ಪತ್ರ ಸಂಖ್ಯೆ: ಆಯುಷ್ 211:ಸಿ(2) 2010–11 ದಿನಾಂಕ: 23–03–2011.
5. ಮಾನ್ಯ ಉಚ್ಚನ್ಯಾಯಾಲಯದ ಸಹಾಯಕ ರಿಜಿಸ್ಟ್ರಾರ್‌ರವರ ಪತ್ರ ಸಂಖ್ಯೆ.ಎಫ್‌ಸಿಎ II/82/2007 ದಿನಾಂಕ: 14–2–2012.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಸರ್ಕಾರದ ವಿವಿಧ ಇಲಾಖೆಗಳ ಮುಖ್ಯಸ್ಥರುಗಳು ಮತ್ತು ಇತರೆ ಅಧಿಕಾರಿಗಳ ಆರ್ಥಿಕ ಅಧಿಕಾರವನ್ನು ಹೆಚ್ಚಿಸಿ ಪರಿಷ್ಕೃತ ಆದೇಶವನ್ನು ಹೊರಡಿಸಲಾಗಿತ್ತು. ಮೇಲೆ (2)ರಲ್ಲಿ ಓದಲಾದ ಆದೇಶದ ಕ್ರಮ ಸಂಖ್ಯೆ. 14 ರಲ್ಲಿ ಇಲಾಖಾ ಮುಖ್ಯಸ್ಥರುಗಳಿಗೆ ಅನಿಪುಣ ಅಂಶಕಾಲಿಕ ಕೆಲಸದಾಳುಗಳ ಮಾಸಿಕ ಸಂಚಿತ ಸಂಭಾವನೆಯ ಮಿತಿಯನ್ನು ಹೆಚ್ಚಿಸಿ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಲಾಗಿತ್ತು. ಹಿಂದಿನ ದಿನಾಂಕ: 2–2–2001ರ ಆದೇಶವನ್ನು ಉತ್ತಮಿಸಿ (Supersede) ಇಲಾಖಾ ಮುಖ್ಯಸ್ಥರುಗಳು ಹಾಗೂ ಇತರೆ ಅಧಿಕಾರಿಗಳಿಗೆ ಆರ್ಥಿಕ ಅಧಿಕಾರವನ್ನು ಪರಿಷ್ಕರಿಸಿ ಹೊರಡಿಸಲಾದ ಮೇಲೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅನಿಪುಣ ಅಂಶಕಾಲಿಕ ಕೆಲಸದಾಳುಗಳ ಸೇವೆಯನ್ನು ಪಡೆಯುವ ಅಧಿಕಾರವನ್ನು ಹಿಂತೆಗೆದುಕೊಳ್ಳಲಾಗಿರುತ್ತದೆ. ಇದಕ್ಕೆ ಬದಲಾಗಿ ದಿನಾಂಕ: 30–4–2010ರ ಸರ್ಕಾರದ ಆದೇಶದಲ್ಲಿನ ಕ್ರಮ ಸಂಖ್ಯೆ 25 ರಲ್ಲಿ ಖಾಲಿ ಇರುವ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ತೆಗೆದುಕೊಳ್ಳುವ ಅಧಿಕಾರವನ್ನು ಇಲಾಖಾ ಮುಖ್ಯಸ್ಥರುಗಳಿಗೆ ನೀಡಲಾಗಿರುತ್ತದೆ.

ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯ ಆಡಳಿತಾಧಿಕಾರಿಗಳು, ಆಯುಷ್ ನಿರ್ದೇಶನಾಲಯ ಇವರು ಸ್ವಚ್ಛತೆ ಮುಂತಾದ ಕಾರ್ಯಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಯ ಸೇವೆಯನ್ನು ಪೂರ್ಣ ದಿನಗಳಿಗೆ ಪಡೆದಲ್ಲಿ ಹೆಚ್ಚಿನ ವೆಚ್ಚವಾಗುವುದಾಗಿ, ಈ ವ್ಯವಸ್ಥೆಗೆ ಅನಿಪುಣ ಅಂಶಕಾಲಿಕ ಕೆಲಸದಾಳುಗಳ ಸೇವೆಯನ್ನು ಪಡೆದಲ್ಲಿ ಸರ್ಕಾರಕ್ಕೆ ಉಳಿತಾಯವಾಗುವುದಲ್ಲದೆ ಅವರ ಮೇಲೆ ನಿಯಂತ್ರಣವಿರುವುದರಿಂದ ಇವರ ಸೇವೆಯನ್ನು ಪಡೆಯುವುದನ್ನು ಮರುಪ್ರಾರಂಭಿಸಲು ಹಿಂದಿನ ಆದೇಶಗಳಲ್ಲಿದ್ದ ಆರ್ಥಿಕ ಅಧಿಕಾರವನ್ನು ಸೇರ್ಪಡಿಸಿ ಪರಿಷ್ಕೃತ ಆದೇಶ ಹೊರಡಿಸಲು ಕೋರಿರುತ್ತಾರೆ. ಮೇಲೆ (5)ರಲ್ಲಿ ಓದಲಾದ ಪತ್ರದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಸಹಾಯಕ ರಿಜಿಸ್ಟ್ರಾರ್ ರವರು ಸಹಾ ಅನಿಪುಣ ಅಂಶಕಾಲಿಕ ಕೆಲಸದಾಳುಗಳ ಸೇವೆಯನ್ನು ಪಡೆಯುವ ಬಗ್ಗೆ ಅನುಮತಿ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಸರ್ಕಾರವು ಅನಿಪುಣ ಅಂಶಕಾಲಿಕ ಕೆಲಸದಾಳುಗಳ ಸೇವೆಯನ್ನು ಪಡೆಯುವುದನ್ನು ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ 7ರ ಟಿಪ್ಪಣಿ–2 ಮತ್ತು 55(2)(ಬಿ) ಪ್ರಕಾರ ಪುನ: ಪ್ರಾರಂಭಿಸಲು ಹಾಗೂ ಇವರ ಮಾಸಿಕ ಸಂಚಿತ ಸಂಭಾವನೆಯ ಗರಿಷ್ಠ ಮಿತಿಯನ್ನು ಪರಿಷ್ಕರಿಸಲು ತೀರ್ಮಾನಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆಇ 05 ಟಿಎಫ್‌ಪಿ 2012, ಬೆಂಗಳೂರು, ದಿನಾಂಕ:26–06–2012.

ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ 7ರ ಟಿಪ್ಪಣಿ–2 ಮತ್ತು 55 (2) (ಬಿ) ಪ್ರಕಾರ ಎಲ್ಲಾ ಇಲಾಖಾ ಮುಖ್ಯಸ್ಥರುಗಳು ಮತ್ತು ಇತರೆ ಅಧಿಕಾರಿಗಳಿಗೆ ಒಟ್ಟಾರೆ ಮೂರು ವರ್ಷಗಳ ಅವಧಿ ಮೀರದಂತೆ ಸಾದಿಲ್ವಾರು ವೆಚ್ಚದಲ್ಲಿ **ಅನಿಪುಣ ಅಂಶಕಾಲಿಕ ಕೆಲಸದಾಳುಗಳ ಸೇವೆಯನ್ನು ಪಡೆಯುವುದನ್ನು ಪುನ: ಪ್ರಾರಂಭಿಸಲು ಮತ್ತು** ಮಾಸಿಕ ಸಂಚಿತ ಸಂಭಾವನೆ ಯನ್ನು ಮಂಜೂರು ಮಾಡುವ ಆರ್ಥಿಕ ಅಧಿಕಾರವನ್ನು ಪ್ರತ್ಯಾಯೋಜಿಸಲು ಮಂಜೂರಾತಿ ನೀಡಲಾಗಿದೆ.

ಈ ಕೆಳಗಿನಂತೆ ಅನಿಪುಣ ಅಂಶಕಾಲಿಕ ಕೆಲಸದಾಳುಗಳ ಮಾಸಿಕ ಸಂಚಿತ ಸಂಭಾವನೆಯನ್ನು ಪರಿಷ್ಕರಿಸಿ ಮಂಜೂರಾತಿ ನೀಡಲಾಗಿದೆ.

ಅಧಿಕಾರದ ವಿವರಗಳು	ಇಲಾಖಾ ಮುಖ್ಯಸ್ಥರುಗಳು	ವಿಭಾಗೀಯ ಮಟ್ಟದ ಅಧಿಕಾರಿಗಳು	ಜಿಲ್ಲಾ ಮಟ್ಟದ ಅಧಿಕಾರಿಗಳು	ಉ.ವಿ.ಮಟ್ಟದ ಅಧಿಕಾರಿಗಳು	ತಾಲ್ಲೂಕು ಮಟ್ಟದ ಅಧಿಕಾರಿಗಳು
ಅಧೀನ ಕಛೇರಿಗಳಲ್ಲಿ ಒಟ್ಟಾರೆ ಮೂರು ವರ್ಷಗಳು ಮೀರದಂತೆ ಸಾದಿಲ್ವಾರು ವೆಚ್ಚದಲ್ಲಿ ಸಂದಾಯವಾಗಬೇಕಾದ ಅನಿಪುಣ ಅಂಶಕಾಲಿಕ ಕೆಲಸದಾಳುಗಳ ಸೇವೆಯನ್ನು ಪಡೆಯಲು ಮಂಜೂರಾತಿ. (ಸಾ.ವೆ.ಕೈ. ನಿಯಮ 7 ರ ಟಿಪ್ಪಣಿ–2 ಮತ್ತು 55(2) (b).	ಗರಿಷ್ಟ ರೂ.3500/– ರವರೆಗೆ ಪ್ರತಿ ತಿಂಗಳು ಪ್ರತಿ ಕೆಲಸದಾಳಿಗೆ	ಗರಿಷ್ಟ ರೂ.3500/– ಗಳವರೆಗೆ ಪ್ರತಿ ತಿಂಗಳು ಪ್ರತಿ ಕೆಲಸದಾಳಿಗೆ	ಗರಿಷ್ಟ ರೂ.3000/– ಗಳವರೆಗೆ ಪ್ರತಿ ತಿಂಗಳು ಪ್ರತಿ ಕೆಲಸದಾಳಿಗೆ	ಗರಿಷ್ಟ ರೂ.2500/– ಗಳವರೆಗೆ ಪ್ರತಿ ತಿಂಗಳು ಪ್ರತಿ ಕೆಲಸದಾಳಿಗೆ	ಗರಿಷ್ಟ ರೂ.2000/– ಗಳವರೆಗೆ ಪ್ರತಿ ತಿಂಗಳು ಪ್ರತಿ ಕೆಲಸದಾಳಿಗೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಿ. ಶಾಮರಾವ್
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ
(ಆರ್ಥಿಕ ನಿಯಮಗಳು, ಆಯವ್ಯಯ ಸಂಕಲನ ಮತ್ತು ಸಮಿತಿ ಶಾಖೆ)

ಪಿ.ಆರ್. 1877